
ಉಚಿತ ಪ್ರತಿಗಳಿಗಾಗಿ ಮತ್ತು
ಉಚಿತ ಪತ್ರಿಕೆಗಳಿಗಾಗಿ
ನಮ್ಮ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಿ



ದಿ ಕ್ರಿಸ್ತಡೆಲ್ಫಿಯನ್ಸ್
(ಕ್ರಿಸ್ತನಲ್ಲಿ ಸಹೋದರ, ಸಹೋದರಿಯರು)
ಸತ್ಯವೇದ ಆಧಾರಿತ ಸಮಾಜದ ಪರಿಚಯ
ಮೂಲ : ರಾಬ್ ಹೈಂಡ್ಮನ್


ಸತ್ಯವೇದದಲ್ಲಿನ ವಿಷಯಗಳ ಬಗ್ಗೆ ಹೆಚ್ಚಿನ ವಿವರ ಹಾಗೂ ಅಂಚೆ ಮೂಲಕ ಉಚಿತವಾಗಿ ಪಾಠಗಳನ್ನು ಪಡೆಯಲಿಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಪತ್ರ ಬರೆಯಬಹುದು.


ನಮ್ಮ ವಿಳಾಸ:
ದ ಕ್ರಿಸ್ಟಡೆಲ್ಫಿಯನ್ಸ್
ಅಂಚೆ ಪೆಟ್ಟಿಗೆ ಸಂಖ್ಯೆ 535, ಫ್ರೇಜರ್ ಟೌನ್
ಬೆಂಗಳೂರು - 560 005


# ನೂತನ ಸೃಷ್ಟಿ

ಸತ್ಯವನ್ನು ತಿಳಿದುಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು

ಸಂಚಿಕೆ 10



* ಕಲ್ಲುಗಳು ಕೂಗುತ್ತಿವೆ
* ನಮ್ಮನ್ನು ಬದಲಾಯಿಸುವ ಸಂಗತಿಗಳು
* ಕನಿಕರವನ್ನು ಕೊಡುವಂತವರಾಗಿರಿ
* ಸುಮ್ಮನೆ ನಿಂತು ದೇವರ ಅದ್ಭುತ ಕಾರ್ಯಗಳನ್ನು ಧ್ಯಾನಿಸು
* ಪ್ರವಾದಿಯಾದ ಎಲೀಷನ ಕಾರ್ಯಗಳು

## ಕ್ರಿಸ್ಟಡೆಲ್ಫಿಯನ್ನರು ಎಂದರೆ ಯಾರು?

ಕ್ರಿಸ್ಟಡೆಲ್ಫಿಯನ್ ಎಂಬ ಪದ ಮೂಲತಃ ಗ್ರೀಕ್ ಭಾಷೆಯ ಎರಡು ಪದಗಳಿಂದ ಬಂದಿದೆ, ಅವುಗಳೆಂದರೆ 'ಕ್ರೈಸ್ಟ್' ಮತ್ತು 'ಅಡೆಲ್ಫೊಸ್' ಅವುಗಳ ಸರಳ ಅರ್ಥವೆಂದರೆ **"ಕ್ರಿಸ್ತನ ಸಹೋದರರು"**ಎಂಬುದಾಗಿದೆ. ಕ್ರಿಸ್ಟಡೆಲ್ಫಿಯನ್ನರು ಪ್ರಪಂಚದಲ್ಲೆಲ್ಲ ಒಂದೇ ಸಮೂಹವಾಗಿದ್ದು, ಸತ್ಯವೇದವು ಒಬ್ಬನೇ ಸತ್ಯದೇವರಿಂದ ಬರೆಸಲ್ಪಟ್ಟಿದ್ದು ಅದನ್ನೇ ಅಧಾರವಾಗಿ ಜೀವನವನ್ನು ನೆಡೆಸುವವರಾಗಿದ್ದೇವೆ.

ನಾವು ಯೇಸು(ದೇವರ ಒಬ್ಬನೇ ಮಗ)ಭೂಲೋಕಕ್ಕೆ ಸರ್ವ ಅಧಿಕಾರವುಳ್ಳವನಾಗಿ ಹಿಂತಿರುಗಿ ಬರುತ್ತಾನೆ ಮತ್ತು ಭೂಲೋಕಕ್ಕೆ ನ್ಯಾಯ, ನೀತಿ ಮತ್ತು ಶಾಂತಿಯನ್ನು ಉಂಟುಮಾಡುತ್ತಾನೆ. ಇಲ್ಲಿನ ಎಲ್ಲಾರೀತಿಯ ಅಸಮಾನತೆ, ಅಶಾಂತಿ, ರಕ್ತಪಾತಗಳನ್ನು ಕೊನೆಗಾಣಿಸುತ್ತಾನೆ ಎಂದು ನಂಬುತ್ತೇವೆ.

ನಾವುಗಳು ಮರಣವನ್ನು ಹೊಂದಿದರೂ ಸಹ ಯೇಸುಕ್ರಿಸ್ತ ನಮ್ಮನ್ನು ಮರಣದಿಂದ ಎಬ್ಬಿಸಿ ನ್ಯಾಯತೀರ್ಪು ಕೊಡುತ್ತಾನೆ. ನಾವು ದೇವರ ವಾಕ್ಯಗಳಿಗೆ ಅವಿಧೇಯರಾಗಿ, ಕೆಟ್ಟವರಾಗಿ, ದೇಹದ ಆಶೆಗಳಿಗೆ ಅನುಗುಣವಾಗಿ ನಡೆದಿದ್ದರೆ ಮರಣವನ್ನು ಕೊಡುತ್ತಾನೆ, ಆದರೆ ನಾವು ದೇವರ ವಾಕ್ಯಗಳನ್ನು ನಂಬಿ ಅವುಗಳನ್ನೇ ಅನುಸರಿಸಿ ನಡೆದರೆ ನಿತ್ಯಜೀವ ಕೊಡುತ್ತಾನೆ ಎಂದು ನಂಬುತ್ತೇವೆ. ನಾವು ಒಬ್ಬ ಮಾನವನು ಜೀವವನ್ನು ಪಡೆಯಬೇಕಾದರೆ ಬಹಳ ಮುಖ್ಯವಾಗಿ ಎರಡು ಆಜ್ಞೆಗಳನ್ನು ಅನುಸರಿಸಲೇಬೇಕು ಎಂದು ನಂಬುತ್ತೇವೆ, ಅವುಗಳೆಂದರೆ: (1)ದೇವರಾದ ಯೆಹೋವನನ್ನು ಪೂರ್ಣ ಹೃದಯದಿಂದ ಪ್ರೀತಿಸಬೇಕು ಮತ್ತು ಆತನನ್ನೊಬ್ಬನನ್ನೆ ಆರಾಧಿಸಬೇಕು, ಮತ್ತು (2)ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬವುಗಳೇ.


**Co-ordinator : Linus Daniel**

**e-mail : info@choose2live.info**
http://www.choose2live.info/noothana_shristi

**Contact:**
The Christadelphians,
P.O.Box No 535,
Bangalore 560 005,
India.


### ನೂತನ ಸೃಷ್ಟಿ ಪತ್ರಿಕೆಯ ತಂಡ

ಲೀನಸ್ ಡ್ಯಾನಿಯಲ್ : ಸಂಯೋಜಕರು

ಚೈತ್ರ ಸ್ವರೂಪ : ಕಾರ್ಯ ನಿರ್ವಹಣೆ, ಪುನರವಲೋಕನ ಮತ್ತು ಡಿ.ಟಿ.ಪಿ ಸಂಯೋಜಕರು.

ಸುಧೀರ್ ಬಿ.ಜಿ : ಭಾಷಾಂತರ ಮತ್ತು ಡಿಟಿಪಿ

ನಿಮ್ಮನ್ನು ಈ ಪತ್ರಿಕೆಯ ಮೂಲಕ ದೇವರ ವಾಕ್ಯಗಳಲ್ಲಿ ಉತ್ತೇಜಿಸುವ ಒಂದು ಪ್ರಯತ್ನ ನಮ್ಮದಾಗಿದೆ, ನೀವು ಇದರ ಮೂಲಕ ಆತ್ಮೀಕವಾಗಿ ಪೋಷಣೆಹೊಂದಬಹುದಾಗಿದೆ ಮತ್ತು ನಿಮ್ಮನ್ನು ಉನ್ನತ ಸ್ಥಿತಿಗೆ ತರಲು ಸಹಕಾರಿಯಾಗಿದೆ. ಸತ್ಯವೇದವನ್ನು ಓದಲು ನಾವು ಉತ್ತೇಜಿಸುತ್ತೇವೆ, ಏಕಂದರೆ ಸತ್ಯವೇದವು ನಿಮ್ಮನ್ನು ವಿವೇಕಿಗಳಾಗಿ ಮಾಡುವುದರ ಜೊತೆಗೆ ನಿಮ್ಮ ರಕ್ಷಣೆಗೆ ಮಾರ್ಗಸೂಚಿಯಾಗಿದೆ.
ಈ ಪತ್ರಿಕೆಯಲ್ಲಿರುವ ಎಲ್ಲಾ ವಸ್ತುವಿಷಯಗಳನ್ನು ಕ್ರಿಸ್ಟಡೆಲ್ಫಿಯನ್ನರ ಆಂಗ್ಲ ಭಾಷೆಯ ವಿಷಯಗಳಿಂದ ಕನ್ನಡಕ್ಕೆ ಭಾಷಾಂತರಿಸಿದೆ.

*"ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು; ಇಗೋ ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು."[2ಕೊರಿಂಥ 5:17]*



# ಕಲ್ಲುಗಳು ಕೂಗುತ್ತಿವೆ

"ಇವರು ಸುಮ್ಮನಾದರೆ ಈ ಕಲ್ಲುಗಳೇ ಕೂಗುವುವು ಎಂದು ನಿಮಗೆ ಹೇಳುತ್ತೇನೆ ಅಂದನು" (ಲೂಕ 19:44)

ಈ ಒಂದು ಚಿಕ್ಕ ಅದ್ಯಯನದಲ್ಲಿ ಡೇವಿಡ್ ಬರ್ಗಸ್ ರವರು ಸತ್ಯವೇದವು ನಿಖರವಾದ ಇತಿಹಾಸವನ್ನು ಹೊಂದಿದೆ ಎಂಬುದನ್ನು ಪ್ರಾಚ್ಯವಸ್ತು ಸಂಶೋಧನೆಗಳ ಆಧಾರದಿಂದ ತಿಳಿಸಿಕೊಟ್ಟಿದ್ದಾರೆ.

## ಸತತವಾದ ಹೋರಾಟ :–

ಸತ್ಯವೇದವನ್ನು ಕುರಿತು ಸಾವಿರಾರು ವರ್ಷಗಳಿದಂದಲೂ ಅನೇಕ ವಿಧ್ವಂಸರು ಟೀಕಿಸುತ್ತಾ ಬಂದಿದ್ದಾರೆ. ಆದರೆ ಅವೆಲ್ಲಾ ಅಧಾರರಹಿತವಾದ ಟೀಕೆಗಳಾಗಿವೆ, ಏಕಂದರೆ ಸತ್ಯವೇದವು ಸತ್ಯದೇವರಿಂದ ಪ್ರೇರಿತವಾಗಿ ಬರೆಸಲ್ಪಟ್ಟ ಏಕೈಕ ಗ್ರಂಥವಾಗಿದೆ. ಈ ವಿಷಯವಾಗಿ ಅನೇಕ ವಾಕ್ಯಗಳನ್ನು ನಾವು ನೋಡಬಹುದಾಗಿದೆ.

***ಮೋಶೆ*** :– "ನಾನು(ಯೆಹೋವ ದೇವರು) ನಿನ್ನ ಬಾಯಿಗೆ ಸಹಾಯವಾಗಿದ್ದು ನೀನು ಮಾತಾಡಬೇಕಾದದ್ದನ್ನು ಬೋಧಿಸುವೆನು" (ವಿಮೋಚನಾಕಾಂಡ 4:12).

***ದಾವೀದ*** :– "ಯೆಹೋವನ ಆತ್ಮವು ನನ್ನಲ್ಲಿ ಉಸುರಿತು; ಆತನ ವಾಕ್ಯವು ನನ್ನ ಬಾಯಲ್ಲಿತ್ತು" (2ಸಮುವೇಲ 23:2).

***ಯೆರೆಮೀಯ*** :– "ಆಗ ಯೆಹೋವನು ಕೈಚಾಚಿ ನನ್ನ ಬಾಯನ್ನು ಮುಟ್ಟಿ–ಇಗೋ, ನಿನ್ನ ಬಾಯಲ್ಲಿ ನನ್ನ ಮಾತುಗಳನ್ನು ಇಟ್ಟಿದ್ದೇನೆ" (ಯೆರೆಮೀಯ 1:9).

***ಯೇಸು*** :– "...ತನ್ನಷ್ಟಕ್ಕೆ ತಾನೇ ಏನೂ ಮಾಡದೆ ತಂದೆಯು ನನಗೆ ಬೋಧಿಸಿದ ಹಾಗಿ ಅದನ್ನೆಲ್ಲಾ ಮಾತಾಡಿದನೆಂದು ನನ್ನ ವಿಷಯವಾಗಿ ನಿಮಗೆ ತಿಳಿಯುವುದು" (ಯೋಹಾನ 8:28).

***ಪೇತ್ರ*** :– "ಯಾಕಂದರೆ ಯಾವ ಪ್ರವಾದನೆಯೂ ಎಂದೂ ಮನುಷ್ಯರ ಚಿತ್ತದಿಂದ ಉಂಟಾಗಲಿಲ್ಲ; ಮನುಷ್ಯರು ಪವಿತ್ರಾತ್ಮ ಪ್ರೇರಿತರಾಗಿ ದೇವರಿಂದ ಹೊಂದಿದ್ದನ್ನೇ ಮಾತಾಡಿದರು" (2ಪೇತ್ರ 1:21).

ಎಲ್ಲಕ್ಕಿಂತ ಬಹು ಮುಖ್ಯವಾಗಿ ನಾವು ತಿಳಿದಿರಬೇಕಾದ ಸಂಗತಿಯೆಂದರೆ, ಸತ್ಯವೇದವು ಬೇರೆ ಪುಸ್ತಕಗಳ ರೀತಿ ಒಂದಾನೊಂದು ಕಾಲದಲ್ಲಿ...., ಎಂಬ ಕತೆಗಳ ಕಾಲ್ಪನಿಕ ಗ್ರಂಥವಲ್ಲ. ಇದರಲ್ಲಿ ನಿಖರವಾದ ಐತಿಹಾಸಿಕ ಘಟನೆಗಳನ್ನು ಮತ್ತು ಕಾಲಗಳನ್ನು ತಿಳಿಸಲಾಗಿದೆ. ಉದಾಹರಣೆಗೆ,

* ***ಮೋಶೆ*** :– ಇಸ್ರಾಯೇಲ್ಯರನ್ನು ಐಗುಪ್ತ(ಈಜಿಪ್ಟ್)ರ ದಾಸತ್ವ(ಗುಲಾಮಗಿರಿ)ದಿಂದ ಬಿಡಿಸಿ ಕಾನಾನ್ ದೇಶಕ್ಕೆ ಕರೆತಂದವನು ಆಗಿದ್ದಾನೆ.
* ***ಅರಸನಾದ ದಾವೀದ*** :– ಫಿಲಿಷ್ಟಿಯ ರಾಜರು ಮತ್ತು ಜನಾಂಗವನ್ನು ಸೋಲಿಸಿದ ಮಹಾ ಪರಾಕ್ರಮಿಯಾದ ಅರಸನಾಗಿದ್ದಾನೆ.

* ***ಅರಸನಾದ ಹಿಜ್ಕೀಯ*** :- ದೇವರ ಮೇಲಿನ ನಂಬಿಕೆಯಿಂದ, ಅಸ್ಸೀರಿಯಾದವರನ್ನು ಸೋಲಿಸಿದ ಅರಸನು ಆಗಿದ್ದಾನೆ.


* ***ಯೇಸು*** :- ರೋಮ್ ಸಾಮ್ರಾಜ್ಯದಲ್ಲಿ ಜನಿಸಿ, ಜೀವಿಸಿ ಸುವಾರ್ತೆಯನ್ನು ಸಾರಿದವನು ಆಗಿದ್ದಾನೆ.

ಸತ್ಯವೇದದ ಘಟನೆಗಳನ್ನು ಕೆಲವರು ಕೇವಲ ಕಾಲ್ಪನಿಕ ಎಂದು ತಳ್ಳಿಹಾಕಿದ್ದರು, ಆದರೆ ಈಗ್ಗೆ ಇನ್ನೂರು ವರ್ಷಗಳಿಂದ ನಡೆದ ಭೂಸಂಶೋಧನೆಗಳಿಂದ ತಿಳಿದುಬಂದ ಅಂಶವೇನೆಂದರೆ, ಸತ್ಯವೇದವು ಇತಿಹಾಸ ಮತ್ತು ರಾಜಕೀಯ ಘಟನೆಗಳನ್ನು ಒಳಗೊಂಡ ನಿಖರವಾದ ಗ್ರಂಥವಾಗಿದೆ ಎಂಬುದಾಗಿದೆ. ಏಕೆ ಇಷ್ಟೊಂದು ನಿಖರವಾಗಿದೆ ಎಂದರೆ, ಇದು ದೇವರಿಂದ ಪ್ರೇರಿತಗೊಂಡ ದೇವರಪುಸ್ತಕವಾಗಿದೆ, ಅದರ ಕಾರ್ಯಗಳು ಇಂದಿಗೂ ನಿರಂತರವಾಗಿ ನಡೆಯುತ್ತಿವೆ.

## ಪುರಾತನವದ ಬರವಣಿಗೆ :-

1980ರ ದಶಕದಲ್ಲಿ "ರಾಕ್ ಹ್ವೆನ್ ಬರಿಯಲ್ ಕೇವ್ಸ್"ಗಳ ಭೂಸಂಶೋಧನೆ ಮಾಡಿದರು, ಅವು ಸುಮಾರು ಕ್ರಿ.ಪೂ 7ನೇ ಶತಮಾನಕ್ಕೆ(ಅಂದರೆ ಸತ್ಯವೇದದ ಹಳೆಯ ಒಡಂಬಡಿಕೆಯ ಕಾಲದ ಅರಸರ ಕಾಲಕ್ಕೆ) ಸೇರಿದವುಗಳಾಗಿದ್ದವು. ಇವುಗಳು ಯೆರೂಸಲೇಮಿನ "ಸ್ಕಾಟಿಷ್ ಪ್ರೆಸ್ ಬಿಟ್ರೇಯಸ್" ಚರ್ಚಿನ ಕಾರ್ ಪಾರ್ಕಿಂಗಿಗೆ ಸ್ಥಳಮಾಡಲು ಅಗೆಯುವ ಸಂದರ್ಭದಲ್ಲಿ ಮೇಲಿನ ಹಳೆಯ ಸಮಾಧಿಯ ಗುಹೆ ಪತ್ತೆಯಾಯಿತು. ಅವುಗಳು 'ಕೆಟೆಫ್ ಹಿನ್ನೋಮ್' ಬೆಟ್ಟದಲ್ಲಿ (ಹಿನ್ನೋಮಿನ ಸೈನಿಕ) ದೊರೆತವು. ಹಿನ್ನೋಮ್ ತಗ್ಗು ಅಥವಾ ಕಣಿವೆಯು ಪುರಾತನ ಯೆರೂಸಲೇಮ್ ಪಟ್ಟಣದ ಕೋಟೆಯ ಹೊರಭಾಗದಲ್ಲಿ ಕಂಡುಬರುತ್ತದೆ.

ಈ ಸಮಾಧಿಯ ಗುಹೆಯನ್ನು ಸಂಶೋಧನೆಗೆ ಒಳಪಡಿಸಿದಾಗ ಮೊದಲು ಖಾಲಿಯಾದ ಸ್ಥಳ ಕಂಡುಬಂದವು, ಆದರೆ ಮುಂದುವರೆದಂತೆ ಆ ಸಮಾಧಿಗಳಲ್ಲಿ ಅನೇಕ ಜೀವನಾವಶ್ಯಕ ವಸ್ತುಗಳನ್ನು ಶೇಖರಿಸಿ ಇಡಲಾಗಿತ್ತು–ಮಡಕೆಗಳು, ಚಿನ್ನದ ಆಭರಣಗಳು, ಅಪರೂಪದ ನಾಣ್ಯಗಳು ಆ ಗವಿಗಳಲ್ಲಿ ದೊರೆತವು. ಜೊತೆಗೆ ಮುಖ್ಯವಾಗಿ ಎರಡು ಬೆಳ್ಳಿಯ ಸುರುಳಿ(ಗ್ರಂಥ)ಗಳು ದೊರೆತವು ಇವು ಅತ್ಯಂತ ಪುರಾತನವೂ ಅಮೂಲ್ಯವಾದವುಗಳು ಆಗಿವೆ. ಇವುಗಳನ್ನು "ಅಮ್ಯುಲೆಟ್ಸ್" ಎಂದು ಕರೆಯಲಾಗಿದೆ.



ಈ ಪುರಾತನ ಸುರುಳಿಗಳನ್ನು ಓದಿ ಅರ್ಥಮಾಡಿಕೊಳ್ಳಲು ಸಂಶೋಧಕ





ವಿಜ್ಞಾನಿಗಳಿಗೆ ಮೂರುವರ್ಷಗಳ ಕಾಲ ಹಿಡಿಯಿತು. ಇವು ಪುರಾತನ ಇಬ್ರಿಯ(ಹಿಬ್ರೂ) ಭಾಷೆಯಲ್ಲಿ ರಚಿತವಾದ ಸುರುಳಿಗಳಾಗಿದ್ದವು. ಇವು ಸತ್ಯವೇದದ ಹಳೆಯ ಒಡಂಬಡಿಕೆ ಅರಣ್ಯಕಾಂಡ ಪುಸ್ತಕದಲ್ಲಿ ಬರೆಸಲ್ಪಟ್ಟಿರುವ, ಯಾಜಕನು ಇಸ್ರಾಯೇಲ್ ಜನಾಂಗದವರಿಗೆ ದೇವರ ಆಶೀರ್ವಾದವನ್ನು ತಿಳಿಸುವ ವಾಕ್ಯಗಳನ್ನು ಒಳಗೊಂಡಿದ್ದವು.

"ಯೆಹೋವನು ನಿಮ್ಮನ್ನು ಆಶೀರ್ವದಿಸಿ ಕಾಪಾಡಲಿ; ಯೆಹೋವನು ಪ್ರಸನ್ನಮುಖದಿಂದ ನಿಮ್ಮನ್ನು ನೋಡಿ ನಿಮ್ಮ ಮೇಲೆ ದಯವಿಡಲಿ; ಯೆಹೋವನು ನಿಮ್ಮ ಮೇಲೆ ಕೃಪಾಕಟಾಕ್ಷವಿಟ್ಟು ಶಾಂತಿಯನ್ನು ಅನುಗ್ರಹಿಸಲಿ" (ಅರಣ್ಯಕಾಂಡ 6:24–26).

ಇದು ಭೂಸಂಶೋಧನೆಯಲ್ಲಿ ದೊರಕಿದ ಅತ್ಯಂತ ಹಳೆಯ ಕಾಲದ ಸತ್ಯವೇದದ ಭಾಗವಾಗಿದೆ. ಏಕಂದರೆ ಮೃತಸಮುದ್ರದ ಬಳಿಯಲ್ಲಿ ದೊರೆತ ಸುರುಳಿಗಳಿಗಿಂತ ಇದು ಸುಮಾರು ನಾನೂರು ವರ್ಷಗಳಷ್ಟು ಹಳೆಯದಾಗಿದೆ. ಆದರೂ ಇಂದು ನಾವು ಓದುತ್ತಿರುವ ಸತ್ಯವೇದದ ವಾಕ್ಯಗಳಿಗೂ ಅದಕ್ಕೂ ಯಾವುದೇ ಮಹತ್ವವದ ಬದಲಾವಣೆಗಳು ಇರುವುದಿಲ್ಲ. ಕೆಲವು ಟೀಕಾಕಾರರು, ಸತ್ಯವೇದದಲ್ಲಿ ಮೋಶೆಯಿಂದ ಬರೆಯಲ್ಪಟ್ಟ ಪುಸ್ತಕಗಳು, ಇಸ್ರಾಯೇಲ್ ರಾಜರ ಕಾಲದ ನಂತರ ಬರೆದಿರುವಂತವುಗಳು ಎಂದು ಟೀಕಿಸುತ್ತಾರೆ. ಆದರೆ ಅವರ ಟೀಕೆಗಳು ಸಂಪೂರ್ಣವಾಗಿ ಸತ್ಯಕ್ಕೆ ವಿರುದ್ಧವಾದುದು ಎಂಬುದನ್ನು ಈ ಗುಹೆಗಳಲ್ಲಿ ದೊರೆತ ಸುರುಳಿಗಳು ರುಜುವಾತುಪಡಿಸುತ್ತಿವೆ, ಮತ್ತು ನಾವು ಸತ್ಯವೇದದಲ್ಲಿ ಸ್ಥಿರವಾದ ನಂಬಿಕೆಯಿಡಲು, ಅದರಂತೆ ನಡೆಯಲು ಸಹಕಾರಿಯಾಗಿವೆ.

ನಿಜವಾಗಿಯೂ, *"ದೇವರ ರಾಜ್ಯವನ್ನು ಕುರಿತು ಕಲ್ಲುಗಳೇ ಇಂದಿಗೂ ಕೂಗುತ್ತಿವೆ"*

***–ಡೇವಿಡ್ ಬರ್ಗ್ಸ್ಟ***


# ನಮ್ಮನ್ನು ಬದಲಾಯಿಸುವ ಸಂಗತಿಗಳು

ಅತ್ಯಂತ ವೇಗವಾಗಿ ಹರಿಯುವ ನೀರಿನಲ್ಲಿ ಹಾಯಿದೋಣಿ ನಡೆಸುವ ನಿಪುಣನು, ತನ್ನ ನೈಪುಣ್ಯತೆಯನ್ನು ಉಪಯೋಗಿಸಿ ತನ್ನ ದೋಣಿಯನ್ನು ನಡೆಸುತ್ತಾನೆ. ಆತ ಅತ್ಯಂತ ನಾಜೂಕಿನಿಂದ ಆ ಪ್ರಬಲವಾದ, ಅಪಾಯಕಾರಿಯಾದ ನೀರಿನಲ್ಲಿ ಸಹ ತನ್ನ ಬುದ್ಧಿಶಕ್ತಿಯ ಮೂಲಕ ನೀರಿನ ಹೊಡೆತದಿಂದ ತಪ್ಪಿಸಿಕೊಂಡು ಬರುವವನಾಗಿದ್ದಾನೆ. ಅದರಂತೆ ಇಂದು ನಮ್ಮ ಜೀವಿತ ಅಡೆತಡೆಗಳಿಂದ ಕೂಡಿದ ನೀರಿನಂತಿದೆ, ನಾವು ದೇವರಕಡೆಗೆ ತಿರುಗಿದರೆ, ನಮ್ಮ ಜೀವನದ ಅಡೆತಡೆಗಳನ್ನು ಹಾಯಿದೋಣಿಯ ರೀತಿ ದಾಟಬಹುದಾಗಿದೆ.

## ಪಶ್ಚಾತಾಪದ ಸಮಯ :–

ಸಾವಿರಾರು ವರ್ಷಗಳ ಹಿಂದೆ ಒಬ್ಬನು ಮಾನವರಿಗೆ ಸುವಾರ್ತೆಯನ್ನು ಸಾರುತ್ತಾ, ನಿಮ್ಮ ಪಾಪ ಕಾರ್ಯಗಳಿಗೆ "ಪಶ್ಚಾತಾಪ"ಪಡಿರಿ ಏಕಂದರೆ ಲೋಕದ ಅಂತ್ಯವು ಸಮೀಪವಾಗಿದೆ ಎಂದು ಬೋಧಿಸಿದ್ದಾನೆ.

ಈ ಮೇಲಿನ ಸಂದೇಶವನ್ನು ನೀಡಿದವನು ಸ್ನಾನಿಕನಾದ ಯೋಹಾನನಾಗಿದ್ದಾನೆ. ಈತನ ಬೋಧನೆಯು ಸುಮಾರು ನಾಲ್ಕುನೂರು ವರ್ಷಗಳ ಮೌನದ ನಂತರ ಯೆಹೋವದೇವರು ಈತನ



ಮೂಲಕ ತನ್ನ ಜನಾಂಗಕ್ಕೆ ಸುವಾರ್ತೆಯನ್ನು ತಿಳಿಸಿದ್ದಾನೆ. ಸತ್ಯವೇದದ ಹಳೆಯ ಒಡಂಬಡಿಕೆ ಕಾಲ ಮುಗಿದ ನಂತರ ಹೊಸ ಒಡಂಬಡಿಕೆ ಪ್ರಾರಂಭವಾಗುವ ಸಮಯದ ನಡುವೆ ಸುಮಾರು ನಾಲ್ಕುನೂರು ವರ್ಷಗಳ ಕಾಲ ದೈವೋಕ್ತಿಗಳು ನಿಂತುಹೋಗಿದ್ದವು. ಆದ್ದರಿಂದ ಸ್ನಾನಿಕನಾದ ಯೋಹಾನನು ಸುವಾರ್ತೆಯನ್ನು ಸಾರಿದಾಗ, ಇದು ಇಸ್ರಾಯೇಲ್ ಜನತೆಗೆ ಒಂದು ಹೊಸ ಅನುಭವವಾಗಿತ್ತು. ಏಕಂದರೆ ಇಸ್ರಾಯೇಲ್ ಜನಾಂಗದ ಇತಿಹಾಸದುದ್ದಕ್ಕೂ ದೇವರು ಇವರೊಟ್ಟಿಗೆ ಪ್ರವಾದಿಗಳ ಮೂಲಕ, ನ್ಯಾಯಸ್ಥಾಪಕರ ಮೂಲಕ, ಅರಸರು, ತನ್ನ ಸೇವಕರು ಮತ್ತು ಯಜಕರ ಮೂಲಕ ಇಸ್ರಾಯೇಲ್ಯರೊಂದಿಗೆ ತನ್ನ



ಆಜ್ಞೆಗಳನ್ನು ತಿಳಿಸಿಕೊಡುತ್ತಿದ್ದನು. ಆನಂತರ ದೇವರು ತನ್ನ ವಿಶೇಷವಾದ ಸಂಬಂಧವನ್ನು ಇಸ್ರಾಯೇಲ್ಯರೊಟ್ಟಿಗೆ ನಿಲ್ಲಿಸಿಬಿಟ್ಟಿದ್ದನು. ಆನಂತರ ಸ್ನಾನಿಕನಾದ ಯೋಹಾನನ ಮುಖಾಂತರ ಮತ್ತೆ ವಿಶೇಷರೀತಿಯಲ್ಲಿ ತನ್ನ ವಾಕ್ಯಗಳನ್ನು ಕೊಟ್ಟಾಗ ಇಸ್ರಾಯೇಲ್ಯರಿಗೆ ನಂಬಲಿಕ್ಕೆ ಸಾಧ್ಯವಾಗಲಿಲ್ಲ.

ಸ್ನಾನಿಕನಾದ ಯೋಹಾನನು ಯಾಜಕವರ್ಗದ ಕುಟುಂಬದಲ್ಲಿ ಜನಿಸಿದಂತವನು ಆಗಿದ್ದನು. ಅಂದು ಯಾಜಕ ವರ್ಗದವರು ಸಮಾಜದಲ್ಲಿ ಉನ್ನತವಾದ ಗೌರವನ್ನು ಹೊಂದಿದ್ದರು ಮತ್ತು ವೈಭವದಿಂದ ಜೀವನ ನಡೆಸುತ್ತಿದ್ದರು. ಆದರೆ ಸ್ನಾನಿಕನಾದ ಯೋಹಾನ ಈ ರೀತಿಯ ಎಲ್ಲಾ ಆಡಂಬರವನ್ನು ಬಿಟ್ಟವನಾಗಿದ್ದನು, ಜೊತೆಗೆ ದೇವರು ಅವನನ್ನು ವಿಶೇಷವಾದ ಕಾರ್ಯಕ್ಕೆ ನೇಮಿಸಿದ್ದನು. ಆತ ಅಡವಿಯಲ್ಲಿ ವಾಸಿಸುವವನಾಗಿದ್ದನು, ಒರಟಾದ ಒಂಟೆಯ ತೊಗಲಿನ ಉಡುಪನ್ನು ಧರಿಸಿದ್ದನು. ಈ ಕಾರ್ಯಗಳ ಮೂಲಕ ಜನರಿಗೆ ತಮ್ಮತಮ್ಮ ಮಾರ್ಗಗಳನ್ನು ಬದಲಾಯಿಸಿಕೊಳ್ಳಲು ಮಾದರಿಯಾದನು.

ಸ್ನಾನಿಕನಾದ ಯೋಹಾನನು ಈ ರೀತಿ ಭಿನ್ನವಾಗಿ ಜೀವಿಸುವುದರ ಮೂಲಕ ಜನರು ಕೇವಲ ಸಂಪ್ರದಾಯಗಳಿಗೆ ಕಟ್ಟಿಬೀಳುವುದು ದೇವರ ಉದ್ದೇಶವಲ್ಲ, ಅದಕ್ಕಿಂತ ಮುಖ್ಯವಾಗಿ ಜನರು ತಮ್ಮ ನಡುವಳಿಕೆಯನ್ನು ಬದಲಾಯಿಸಿಕೊಂಡು ಹೊಸಬರಾಗಿ ನಡೆಯಬೇಕೆಂಬುದನ್ನು ತೋರಿಸಿಕೊಡುವುದೇ ಆಗಿತ್ತು.

## ದೇವರ ರಾಜ್ಯ :–

ಸತ್ಯವೇದದ ಹೊಸ ಒಡಂಬಡಿಕೆಯು–ಸ್ನಾನಿಕನಾದ ಯೋಹಾನನು ಇಸ್ರಾಯೇಲ್ಯರನ್ನು ದೇವರ ಕಡೆಗೆ ತಿರುಗಿಸುವುದಕ್ಕೆ ಬಂದವನು ಎಂಬುದಾಗಿ ತಿಳಿಸಿಕೊಡುತ್ತದೆ. ಇದನ್ನು ಮಾರ್ಕನು ತನ್ನ ಸುವಾರ್ತೆಯಲ್ಲಿ ತಿಳಿಸಿಕೊಡುತ್ತಾನೆ–"ದೇವಕುಮಾರನಾದ ಯೇಸುಕ್ರಿಸ್ತನ ವಿಷಯವಾದ ಸುವಾರ್ತೆಯ ಪ್ರಾರಂಭವು. ಇಗೋ ನಾನು ನನ್ನ ದೂತನನ್ನು ನಿನ್ನ ಮುಂದೆ ಕಳುಹಿಸುತ್ತೇನೆ; ನೀನು ಹೋಗುವ ದಾರಿಯನ್ನು ಅವನು ಸರಿಮಾಡುವನೆಂತಲೂ, ಕರ್ತನ ದಾರಿಯನ್ನು ಸರಿಮಾಡಿರಿ; ಆತನ ಹಾದಿಗಳನ್ನು ನೆಟ್ಟಗೆ ಮಾಡಿರಿ ಎಂದು ಅಡವಿಯಲ್ಲಿ ಕೂಗುವವನ ಶಬ್ದವದೆ ಎಂತಲೂ ಪ್ರವಾದಿಯಾದ ಯೆಶಾಯನ ಗ್ರಂಥದಲ್ಲಿ ಬರೆದಿರುವ ಪ್ರಕಾರ ಯೋಹಾನನು ಬಂದು ಜನರಿಗೆ ನೀವು ಪಾಪ ಪರಿಹಾರಕ್ಕಾಗಿ ದೇವರಕಡೆಗೆ ತಿರುಗಿಕೊಂಡು ದಿಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಸಾರಿಹೇಳುತ್ತಾ, ಅಡವಿಯಲ್ಲಿ ದೀಕ್ಷಾಸ್ನಾನ ಮಾಡಿಸುತ್ತಾ ಇದ್ದನು" (ಮಾರ್ಕ 1:1–4).

ಸುವಾರ್ತೆಯ ಪ್ರಾರಂಭದಲ್ಲೇ ಸ್ನಾನಿಕನಾದ ಯೋಹಾನನ ಬಗ್ಗೆ, ಆತನ ಕಾರ್ಯಗಳ ಬಗ್ಗೆ ತಿಳಿಸಲಾಗಿದೆ(ಸುವಾರ್ತೆಗಳಲ್ಲಿ ಮಾರ್ಕನ ಸುವಾರ್ತೆ ಮೊದಲು ಬರೆಯಲ್ಪಟ್ಟದ್ದು ಆಗಿದೆ). ಹಳೆಯ ಒಡಂಬಡಿಕೆಯಲ್ಲಿ ದೇವರು ವಾಗ್ದಾನ ಮಾಡಿದಂತೆ ಸ್ನಾನಿಕನಾದ ಯೋಹಾನನು ಬಂದನು ಮತ್ತು ದೇವರ ರಾಜ್ಯ ಸಮೀಪಿಸಿತು, ನಿಮ್ಮ ಪಾಪ ಕಾರ್ಯಗಳಿಗೆ ಪಶ್ಚಾತಾಪಪಟ್ಟು ದೇವರ ಕಡೆಗೆ ತಿರುಗಿಕೊಳ್ಳಿರಿ ಎಂದು ಸಾರಿ ಹೇಳುವವನಾದನು.

ಮತ್ತಾಯನು ಬರೆದ ಸುವಾರ್ತೆಯಲ್ಲಿ ಈ ವಿಷಯವಾಗಿ ಚಿಕ್ಕದಾಗಿ ಅರ್ಥಪೂರ್ಣವಾಗಿ ತಿಳಿಸಲ್ಪಟ್ಟಿದೆ–"ಪರಲೋಕ ರಾಜ್ಯವು ಸಮೀಪವಾಯಿತು; ದೇವರ ಕಡೆಗೆ ತಿರುಗಿಕೊಳ್ಳಿರಿ" (ಮತ್ತಾಯ 3:2). ಇನ್ನೂ ಬಹಳ ಮುಖ್ಯವಾಗಿ ನಾವು ತಿಳಿಯಬೇಕಾದ ಅಂಶವೆಂದರೆ ಯೇಸುಕ್ರಿಸ್ತನು ಸಹ ಇದೇ ಸುವಾರ್ತೆಯನ್ನು ಪ್ರಾರಂಭದಿಂದಲೇ ತಿಳಿಸಿಕೊಟ್ಟಿದ್ದಾನೆ.

“ಅಂದಿನಿಂದ ಯೇಸು–ಪರಲೋಕ ರಾಜ್ಯವು ಸಮೀಪಿಸಿತು; ದೇವರ ಕಡೆಗೆ ತಿರುಗಿಕೊಳ್ಳಿರಿ ಎಂದು ಸಾರಿ ಹೇಳುವುದಕ್ಕೆ ಪ್ರಾರಂಭಿಸಿದನು”

ಸ್ನಾನಿಕನಾದ ಯೋಹಾನ ಮತ್ತು ಯೇಸುಕ್ರಿಸ್ತ ಇಬ್ಬರೂ ಒಂದೇ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಜನರು ತಮ್ಮ ಮಾರ್ಗಗಳನ್ನು ಬದಲಾಯಿಕೊಳ್ಳಬೇಕು, ಏಕಂದರೆ ಒಂದು ಹೊಸದಾದ ರಾಜ್ಯವು ಅಂದರೆ ಪರಲೋಕ ರಾಜ್ಯವು ಬರುತ್ತದೆ. ಆದಕ್ಕಾಗಿ ಮಾನವರು ತಮ್ಮ ಕೆಟ್ಟ ಮಾರ್ಗವನ್ನು ಬದಲಿಸಿಕೊಂಡು ದೇವರ ಮಾರ್ಗದಲ್ಲಿ ನಡೆಯಬೇಕಾಗಿದೆ.

## ಪಶ್ಚಾತ್ತಾಪವೆಂದರೆ ಏನು?

ಅಂದಿನ ಜನರಿಗೆ ಯೋಹಾನನು ಉಪದೇಶ ಮಾಡಿದಾಗ, ಕೆಲವರಿಗೆ ಈ ವಾಕ್ಯಗಳಿಂದ ಆಶ್ಚರ್ಯವು ಸಹ ಉಂಟಾಯಿತು. ಇಂದು ನಮಗೂ ಸಹ ನಿಮ್ಮ ಹಿಂದಿನ ಕಾರ್ಯಗಳಿಗೆ ಪಶ್ಚಾತ್ತಾಪಪಡಿರಿ ಎಂದು ಯಾರಾದರೂ ಹೇಳಿದರೆ ನಮಗೆ ಆಶ್ಚರ್ಯವಾಗಬಹುದು. ಆದರೆ ಅಂದಿನ ಯೆಹೂದ್ಯರು ದೇವರ ಧರ್ಮಶಾಸ್ತ್ರವನ್ನು ತಿಳಿದವರಾಗಿದ್ದರು, ಅವರಿಗೆ ಸತ್ಯವೇದದ ಹಳೆಯ ಒಡಂಬಡಿಕೆಯ ಸಂಪೂರ್ಣ ಜ್ಞಾನವಿತ್ತು. ಅಂದು ಸ್ನಾನಿಕನಾದ ಯೋಹಾನನು ಉಪದೇಶ ಮಾಡಿದಾಗ ಪಶ್ಚಾತ್ತಾಪಪಟ್ಟು ದೇವರ ಕಡೆಗೆ ತಿರುಗಿಕೊಳ್ಳಿರಿ ಎಂದು ತಿಳಿಸಿದಾಗ–ಅವರಿಗೆ ನಾವು ನಮ್ಮ ಮಾರ್ಗಗಳನ್ನು ಬದಲಾಯಿಸಿಕೊಳ್ಳಬೇಕು, ನಮ್ಮ ಜೀವನದ ಶೈಲಿಯನ್ನು ಬದಲಾಯಿಸಿಕೊಳ್ಳಬೇಕು ಎಂದು ಅರ್ಥವಾಯಿತು. ಪಶ್ಚತ್ತಾಪ ಪಡುವುದು ಎಂದರೆ ದೇವರಿಂದ ದೂರಮಾಡುವ ಕೆಟ್ಟಕಾರ್ಯಗಳನ್ನು ಬಿಟ್ಟು ಆ ಕಾರ್ಯಗಳಿಗಾಗಿ ಮನಮರುಗಿ ದೇವರ ಕಡೆಗೆ ತಿರುಗಿಕೊಳ್ಳುವುದೇ ಆಗಿದೆ. ಆದಕ್ಕಾಗಿಯೇ ಯೋಹಾನ ಮತ್ತು ಯೇಸುಕ್ರಿಸ್ತ ಇಬ್ಬರೂಸಹ ಇಸ್ರಾಯೇಲ್ಯರಿಗೆ ನೀವು ನಿಮ್ಮ ಮಾರ್ಗಗಳನ್ನು ಬದಲಾಯಿಸಿಕೊಂಡು ದೇವರಕಡೆಗೆ ತಿರುಗಿಕೊಳ್ಳಿರಿ ಎಂದು ತಿಳಿಸಿದ್ದಾರೆ.

ಬಹಳ ಹಿಂದಿನಿಂದಲೂ ಪ್ರವಾದಿಗಳ ಮೂಲಕ ಈ ವಿಷಯವನ್ನು ದೇವರು ತನ್ನ ಜನರಿಗೆ ತಿಳಿಸಿಕೊಟ್ಟಿದ್ದಾನೆ:

***ಯೆರೆಮೀಯ*** :–“ನೀವೆಲ್ಲರೂ ನಿಮ್ಮನಿಮ್ಮ ದುರ್ಮಾರ್ಗದಿಂದಲೂ, ದುಷ್ಕೃತ್ಯಗಳಿಂದಲೂ ಹಿಂದಿರುಗಿರಿ, ನಿಮಗೆ ಶಾಶ್ವತ ಸ್ವಾಸ್ತ್ಯವಾಗಿರಲಿ ಎಂದು ಯೇಹೋವನು ಪುರಾತನ ಕಾಲದಲ್ಲಿ ನಿಮಗೂ ನಿಮ್ಮ ಪಿತೃಗಳಿಗೂ ಅನುಗ್ರಹಿಸಿದ ದೇವರೊಟ್ಟಿಗೆ ನೆಲೆಗೊಳ್ಳಿರಿ; ಅನ್ಯದೇವತೆಗಳನ್ನು ಹಿಂಬಾಲಿಸಿ ಸೇವಿಸಿ ಪೂಜಿಸಬೇಡಿರಿ; ನಿಮ್ಮ ಕೈಕೆಲಸದ ಬೊಂಬೆಗಳಿಂದ ನನ್ನನ್ನು ರೇಗಿಸದಿರಿ” (ಯೆರೆಮೀಯ 25:5–6).

***ಯೆಹೆಜ್ಕೇಲ*** :–“ನೀವು ನಿಮ್ಮ ಬೊಂಬೆಗಳನ್ನು ತೊರೆದುಬಿಟ್ಟು ಹಿಂದಿರುಗಿರಿ, ನಿಮ್ಮ ಎಲ್ಲಾ ಅಸಹ್ಯವಸ್ತುಗಳ ಕಡೆಗೆ ಬೆನ್ನುಮಾಡಿರಿ” (ಯೆಹೆಜ್ಕೇಲ 14:6).

***ಹೋಶೇಯ*** :–“ಇಸ್ರಾಯೇಲೇ, ನೀನು ಹಿಂದಿರುಗಿ ನಿನ್ನ ದೇವರಾದ ಯೆಹೋವನನ್ನು ಸೇರಿಕೋ; ನಿನ್ನ ಅಪರಾಧದಿಂದಲೇ ನೀನು ಮುಗ್ಗರಿಸಿ ಬಿದ್ದಿ.



ಪಶ್ಚತ್ತಾಪದ ಮಾತುಗಳನ್ನು ತೆಗೆದುಕೊಂಡು ಯೆಹೋವನ ಬಳಿಗೆ ಹಿಂತಿರುಗು” (ಹೋಶೇಯ 14:1–2).

***ಯೋವೇಲ*** :–“ಯೆಹೋವನು ಇಂತೆನ್ನುತ್ತಾನೆ–ಈಗಲಾದರೋ ನೀವು ಮನಃಪೂರ್ವಕವಾಗಿ ನನ್ನಕಡೆಗೆ ತಿರಿಗಿಕೊಂಡು ಉಪವಾಸಮಾಡಿರಿ, ಅಳಿರಿ, ಗೋಳಾಡಿರಿ; ನಿಮ್ಮ ಬಟ್ಟೆಗಳನ್ನಲ್ಲ ಹೃದಯಗಳನ್ನು ಹರಿದುಕೊಂಡು ನಿಮ್ಮ ದೇವರಾದ ಯೆಹೋವನಕಡೆಗೆ ತಿರಿಗಿಕೊಳ್ಳಿರಿ; ಆತನು ದಯೆಯೂ ಕನಿಕರವೂ ದೀರ್ಘಶಾಂತಿಯೂ, ಮಹಾಕೃಪೆಯೂ ಉಳ್ಳವನಾಗಿ ಮಾಡಬೇಕೆಂದಿದ್ದ ಕೇಡಿಗೆ ಮನಮರುಗುತ್ತಾನೆ” (ಯೋವೇಲ 2:12–13).

***ಜೆಕರ್ಯ*** :–“ನಿಮ್ಮ ಪಿತೃಗಳಂತರಬೇಡಿರಿ; ಪೂರ್ವಕಾಲದ ಪ್ರವಾದಿಗಳು ಅವರಿಗೆ–ಸೇನಾಧೀಶ್ವರ ಯೆಹೋವನು ಇಂತೆನ್ನುತ್ತಾನೆ ನಿಮ್ಮ ದುರ್ಮಾರ್ಗ ದುಷ್ಕೃತ್ಯಗಳಿಂದ ಹಿಂತಿರುಗಿರಿ ಎಂದು ಸಾರಿದರೂ ಅವರು ನನ್ನ ಮಾತನ್ನು ಕಿವಿಗೊಟ್ಟು ಕೇಳಲಿಲ್ಲ; ಇದು ಯೆಹೋವನ ನುಡಿ” (ಜೆಕರ್ಯ 1:4).

## ಕೆಟ್ಟದ್ದರಿಂದ ಒಳ್ಳೆಯಕಡೆಗೆ :–

ದೇವರ ವಿಷಯವಾಗಿ ಬಹುಪಾಲು ಮಂದಿ ಚಿಂತಿಸುವುದಿಲ್ಲ, ಆ ವಿಷಯವಾಗಿ ಮಾತನಾಡಲೂ ಇಷ್ಟಪಡುವುದಿಲ್ಲ. ಆದರೆ ನಾವು ಯಾಕೆ ಈ ವಿಷಯವನ್ನು ಗಣನೆಗೆ ತೆಗೆದುಕೊಳ್ಳಬೇಕು? ನಾವುಗಳು ಸಹ ಪ್ರಪಂಚದ ಬಹುಪಾಲು ಜನರು ಯಾವ ಮಾರ್ಗದಲ್ಲಿ ಚಲಿಸುತ್ತಿರುತ್ತಾರೋ ಅದೇ ಮಾರ್ಗದಲ್ಲಿ ಹೋಗುವುದು ಸುಲಭವಲ್ಲವೇ? ಇದೇ ರೀತಿ ಸತ್ಯವೇದದ ಹಳೆಯ ಒಡಂಬಡಿಕೆಯ ಇಸ್ರಾಯೇಲ್ ರಾಜರ ಕಾಲದಲ್ಲೂ ನಡೆಯುತ್ತಿತ್ತು. ದೇಶದಲ್ಲಿ ಶಾಂತಿ, ನೆಮದಿಗಳು ನೆಲೆಸಿದ್ದಾಗ ಎಲ್ಲೋ ಕೆಲವು ಮಂದಿ ಮಾತ್ರ ದೇವರು ಮತ್ತು ಆತನ ನಿಯಮಗಳಿಗೆ ಒಳಪಟ್ಟು ನಡೆಯುತ್ತಿದ್ದರು. ಆದರೆ ಮಿಕ್ಕ ಬಹುತೇಕ ಮಂದಿ ತಮ್ಮ ಇಷ್ಟಬಂದ ರೀತಿಯಲ್ಲಿ ನಡೆಯುತ್ತಾ



ದೇವರನ್ನು ಮರೆತುಬಿಟ್ಟಿದ್ದರು. ಆದರೆ ಯಾವಾಗ ಕಷ್ಟಸಂಕಟಗಳು ಬರುತ್ತಿದ್ದವೋ ಆಗಮಾತ್ರ ದೇವರ ಬಳಿಗೆ ಬರುತ್ತಿದ್ದರು. ಇಂದಿನ ಜನರು ಅದೇರೀತಿ ನಿಜದೇವರನ್ನು ಸಂಪೂರ್ಣವಾಗಿ ಮರೆತು, ತಮ್ಮದೇ ಆದ ಕೆಟ್ಟಮಾರ್ಗಗಳಲ್ಲಿ ಜೀವಿಸುತ್ತಿದ್ದಾರೆ. ಒಳ್ಳೆಯ ಮಾರ್ಗ ಯಾವುದು ಎಂಬುದನ್ನು ಸತ್ಯದೇವರು ತೋರಿಸಿಕೊಟ್ಟಿದ್ದರೂ ಆ ಮಾರ್ಗದ ಆಯ್ಕೆ ಇಂದಿನ ಜನರಿಗೆ ಬೇಡವಾಗಿದೆ.

ಏಕಂದರೆ ಮಾನವನಲ್ಲಿ ಸ್ವಾಭಾವಿಕವಾಗಿ ದೈಹಿಕ ಆಶೆಗಳು ಬರುತ್ತವೆ, ಅವುಗಳನ್ನು ಪೂರೈಸಿಕೊಳ್ಳಲು ಮಾನವನು ಸ್ವಾರ್ಥಚಿಂತಕನೂ, ಹಣದಾಶೆಯುಳ್ಳವನೂ, ಬೇರೆಯವರಿಗಿಂತ ನಾನು ಮೇಲಿನವನು ಆಗಬೇಕು ಎಂಬ ದುರಾಶೆಗಳಿಗೆ ಒಳಬೀಳುತ್ತಾನೆ. ಇವುಗಳಿಗಾಗಿ ಒಳ್ಳೆಯ ಕಾರ್ಯಗಳಿಗೆ ಬದಲಾಗಿ ಕೆಟ್ಟಕಾರ್ಯಗಳನ್ನು ಮನಸ್ಸಿನಲ್ಲಿ ಚಿಂತಿಸಿ ಕೆಟ್ಟವುಗಳನ್ನು ಮಾಡುವವನಾಗುತ್ತಾನೆ. ಈ ವಿಷಯವಾಗಿ ಯೇಸುಕ್ರಿಸ್ತ ನಮ್ಮನ್ನು ಕುರಿತು ಈ ರೀತಿಯಾಗಿ ತಿಳಿಸಿಕೊಟ್ಟಿದ್ದಾನೆ-"ಮನುಷ್ಯನೊಳಗಿಂದ ಹೊರಡುವಂತವುಗಳೇ ಮನುಷ್ಯನನ್ನು ಹೊಲೆಮಾಡುವುದು; ಒಳಗಿನಿಂದ ಅಂದರೆ ಮನುಷ್ಯರ ಮನಸ್ಸಿನೊಳಗಿಂದ ಸೂಳೆಗಾರಿಕೆ, ಕಳ್ಳತನ, ಕೊಲೆ, ಹಾದರ, ದ್ರವ್ಯಾಶೆ, ಕೆಡುಕತನ, ಮೋಸ, ಬಂಡುತನ, ಹೊಟ್ಟೆಕಿಚ್ಚು, ಬೈಗಳು, ಸೊಕ್ಕು, ಬುದ್ಧಿಗೇಡಿತನ ಇವೇ ಮೊದಲಾದವುಗಳ ಕೆಟ್ಟ ಆಲೋಚನೆಗಳು ಹೊರಡುತ್ತವೆ. ಈ ಕೆಟ್ಟವಿಷಯಗಳೆಲ್ಲಾ ಒಳಗಿಂದ ಹೊರಟು ಮನುಷ್ಯನನ್ನು ಹೊಲೆಮಾಡುತ್ತವೆ ಅಂದನು" (ಮಾರ್ಕ7:20).

ಈ ರೀತಿಯ ಕೆಟ್ಟ ಆಲೋಚನೆಗಳನ್ನು ಹೊಸಒಡಂಬಡಿಕೆಯಲ್ಲಿ "ಶರೀರದ ಆಶೆಯ ಕಾರ್ಯಗಳು" ಎಂಬುದಾಗಿ ತಿಳಿಸಲಾಗಿದೆ (ಉದಾ:-ಗಲಾತ್ಯದವರಿಗೆ 5:19-21, ಮತ್ತು ರೋಮಾಪುರದವರಿಗೆ 1:28-32).

## ಕಠಿಣವಾದ ಆಯ್ಕೆಯನ್ನು ಎದುರಿಸುವುದು :-

ಈಗ ನಮ್ಮಮುಂದೆ ಆಯ್ಕೆಗಳಿವೆ, ಒಂದು ನಮ್ಮ ನಡುವಳಿಕೆಗಳ ಬಗ್ಗೆ ಯಾವುದೇ ಪಶ್ಚಾತ್ತಾಪಪಡದೆ ಲೋಕದವರ ರೀತಿಯಲ್ಲಿ ನಡೆಯುವುದು. ಇನ್ನೊಂದು ನಮ್ಮ ಮಾರ್ಗವನ್ನು ಬದಲಾಯಿಸಿಕೊಂಡು ಸತ್ಯದೇವರ ಕಡೆಗೆ ತಿರುಗಿಕೊಳ್ಳುವುದು. ಒಂದನೇ ಆಯ್ಕೆ ಬಹಳ ಸುಲಭವಾದುದಾಗಿದೆ, ಏಕಂದರೆ ಅದರಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಆದರೆ ಎರಡನೇ ಆಯ್ಕೆ ಕಠಿಣವಾಗಿದೆ, ಏಕಂದರೆ ನಾವು ನಮ್ಮ ಕೆಟ್ಟಗುಣಗಳನ್ನು, ಕೆಟ್ಟಕಾರ್ಯಗಳನ್ನು ಬಿಡಬೇಕು, ಲೋಕದ ಸಂಕಟಗಳನ್ನು ಎದುರಿಸಬೇಕು, ಇತರರಿಗಿಂತ ಭಿನ್ನವಾಗಿ ಜೀವಿಸಿ ಸತ್ಯದೇವರು ತಿಳಿಸಿಕೊಟ್ಟ ಮಾರ್ಗದಲ್ಲೇ ನಡೆಯಬೇಕು. ಆಗ ಸತ್ಯದೇವರು ಯೇಸುಕ್ರಿಸ್ತನ ಮೂಲಕ ಶಾಂತಿ ಸಮಾಧಾನ ಕೊಡುತ್ತಾನೆ ಮತ್ತು ಅಂತಿಮವಾಗಿ ದೇವರ ರಾಜ್ಯ ಭೂಲೋಕದಲ್ಲಿ ಸ್ಥಾಪನೆಯಾಗುವಾಗ ನಿತ್ಯಜೀವವನ್ನು ದಯಪಾಲಿಸುತ್ತಾನೆ.

ಆದ್ದರಿಂದ ಬಹುಪಾಲು ಜನರಿಗೆ ತಮ್ಮ ಜೀವನದ ಶೈಲಿಗೆ ವಿರುದ್ಧವಾಗಿ ನಡೆಯುವುದನ್ನು ಆಯ್ಕೆ ಮಾಡಲು ಕಠಿಣವೆನಿಸುತ್ತದೆ. ಆದರೆ ದೇವರು ನಮಗೆ ಸ್ಥಿರವಾಗ್ದಾನ ಮಾಡಿರುವುದರಿಂದ ನಾವು ನಮ್ಮ ಜೀವನದ ಮಾರ್ಗವನ್ನು ಬದಲಾಯಿಸಿಕೊಂಡರೆ ದೇವರು ಯೇಸುಕ್ರಿಸ್ತನ ಮೂಲಕ ನಿತ್ಯಜೀವವನ್ನು ದಯಪಾಲಿಸಲು ಅತ್ಯಂತ ಉತ್ಸುಕನಾಗಿದ್ದಾನೆ.



# ಕನಿಕರವನ್ನು ಕೊಡುವಂತವರಾಗಿರಿ : ಸಮಾಧಾನ ಮತ್ತು ಕನಿಕರ ತೋರಿಸುವುದರಲ್ಲಿ ಆಸಕ್ತರಾಗಿರಿ

ಕೆಲವು ವರ್ಷಗಳ ಹಿಂದೆ ಒಬ್ಬ ಸಹೋದರಿಯ ಗಂಡನು ಕ್ಯಾನ್ಸರ್ ಖಾಯಿಲಿಯಿಂದ ಮೃತಪಟ್ಟರು. ಆಕೆ ನನಗೆ ನಾನು ಈಗ ಪ್ರಪಂಚದಲ್ಲಿ ಒಂಟಿಯಾಗಿಬಿಟ್ಟಿದ್ದೇನೆ, ನನ್ನ ಭಾವನೆಗಳನ್ನು ಮತ್ತು ಇತರೆ ವಿಷಯಗಳನ್ನು ಯಾರೊಂದಿಗೂ ಹಂಚಿಕೊಳ್ಳಲು ಆಗುತ್ತಿಲ್ಲ, ಖಿನ್ನತೆ ನನ್ನನ್ನು ಆವರಿಸಿದೆ, ಒಬ್ಬಳೇ ಕುಳಿತು ಅಳುತ್ತೇನೆ ಎಂದು ತಿಳಿಸಿದ್ದಳು. ಇತ್ತೀಚೆಗೆ ಇನ್ನೊಬ್ಬ ಸಹೋದರಿ ಕೂಡ ಇದೇ ರೀತಿಯ ಅನುಭವವನ್ನು ಹೊಂದಿದ್ದಾಗಿ ತಿಳಿಸಿದಳು. ಹಾಗಾದರೆ ಈ ಇಬ್ಬರು ಸಹೋದರಿಯರಿಗೆ ನಾನು ಏನು ಹೇಳಬಹುದು? "ಅವರಿಗೆ ನೀವು ಸತ್ಯವೇದವನ್ನು ದಿನವೂ ತಪ್ಪದೇ ಓದಿ ಮತ್ತು ಪ್ರಾರ್ಥಿಸಿ" ಇದರಿಂದ ಎಲ್ಲವೂ ಸರಿಹೋಗುತ್ತದೆ, ಮತ್ತು ನೀವು ನಿಮಗಿರುವ ಸಮಸ್ಯೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಸರಿಯಾದ ಸಮಯತೆಗೆದುಕೊಳ್ಳಿ, ಹಾಗೂ ಆ ಸಮಸ್ಯೆಯ ಸಮರ್ಥ ಪರಿಹಾರಕ್ಕೆ ಒಂದು ಯೋಜನೆ ರೂಪಿಸುವುದರಲ್ಲಿ ಆಸಕ್ತರಾಗಿರಿ, ಜೀವನವನ್ನು ಒಪ್ಪಿಕೊಳ್ಳಿ ಎಂಬುದಾಗಿ ಸಂತೈಸಬಹುದು.



ಆದರೆ ಈ ವಿಷಯಗಳನ್ನು ಒಪ್ಪಿಕೊಳ್ಳುವುದು, ಅದರಂತೆ ನಡೆಯುವುದು ಸುಲಭದ ಕಾರ್ಯವಲ್ಲ. ನಾವು ಏಕಾಂಗಿಯಾಗಿದ್ದರೂ ನಮ್ಮ ಸಮಸ್ಯೆಗಳನ್ನು ಸರಿಯಾಗಿ ಅರಿತುಕೊಳ್ಳುವುದು, ನಮಗೆ ಅನೇಕ ಶ್ರಮ ಸಂಕಟಗಳಿದ್ದಾಗಲೂ ಬೇರೊಬ್ಬರ ಸಂತೋಷ ಬಯಸಿ ಅವರಲ್ಲಿ ಭಾಗಿಯಾಗುವುದು ತುಂಬಾ ಕಷ್ಟಕರವಾದುದು ಆಗಿದೆ. ಒಬ್ಬರ ಜೊತೆ 40-50ವರ್ಷಗಳ ಕಾಲ ಜೊತೆಯಾಗಿ ಜೀವಿಸಿ ಅಥವಾ ಕೆಲವೇ ತಿಂಗಳುಗಳ ಜೀವಿಸಿ ಅವರನ್ನು ಅಗಲಿದಾಗ ಅತ್ಯಂತ ದುಃಖವಾಗುವುದು ಸಹಜವೇ ಆಗಿದೆ.

ಹಾಗಾಗಿ ಮೇಲಿನ ಇಬ್ಬರು ಸಹೋದರಿಯರ ಸಮಸ್ಯೆ ನೈಜವಾದುದ್ದೇ ಆಗಿದೆ, ಆದಕ್ಕಾಗಿ ಅಂದರೆ ಅವರ ಸಮಸ್ಯೆ

ಪರಿಹಾರಕ್ಕಾಗಿ ಸತ್ಯವೇದವನ್ನು ದಿನನಿತ್ಯ ಓದುವುದು ಬಹಳ ಮುಖ್ಯವಾದುದಾಗಿದೆ. ಏಕಂದರೆ ಅದರಲ್ಲಿ ದೇವರ ವಾಕ್ಯಗಳಿದ್ದು ಅವುಗಳ ಮೂಲಕ ನಾವು ದೇವರ ಜ್ಞಾನ ಪಡೆಯಬಹುದಾಗಿದೆ ಮತ್ತು ಆತನ ಯೋಜನೆ ಉದ್ದೇಶಗಳನ್ನು ಅರ್ಥಮಾಡಿಕೊಳ್ಳಬಹುದಾಗಿದೆ.

ಜೊತೆಗೆ ಪ್ರಾರ್ಥನೆಯು–ನಾವು ನಮ್ಮ ನೋವು ಸಂಕಟ ಯೋಚನೆಗಳನ್ನು ದೇವರೊಟ್ಟಿಗೆ ಹಂಚಿಕೊಳ್ಳುವ ಏಕೈಕ ಮಾರ್ಗವಾಗಿದೆ. ಹೌದು ಇದೇ ನಮ್ಮ ಖಿನ್ನತೆ ಪರಿಹಾರಕ್ಕೆ ಉತ್ತಮಮಾರ್ಗ, ಆದರೆ ಇದು ಅತಿ ಕಠಿಣವೆನಿಸುತ್ತದೆ, ಆದರೂ ಉತ್ತಮವಾದ ಅವಕಾಶವಾಗಿದೆ.

ಯಾರಾದರೂ ಒಬ್ಬರಿಗೆ ಒಂದು ರೋಗದ ಸಮಸ್ಯೆಯಿದ್ದರೆ, ವೈದ್ಯರ ಬಳಿ ತಪಾಸಣೆ ಮಾಡಿಸಿದಾಗ ಅವರಿಗೆ ಅತ್ಯಂತ ಭಯಂಕರವಾದ ವ್ಯಾಧಿ ಇದೆ ಎಂದು ತಿಳಿದುಬಂದಾಗ, ಅದು ಅವರನ್ನು ದಿಗ್ಭ್ರಮೆಗೊಳಿಸಿತ್ತದೆ ಮತ್ತು ಅದು ಅವರ ಗ್ರಹಿಕೆಗೆ ಮೀರಿದ ಸಂಗತಿಯಾಗಿರುತ್ತದೆ. ಆದರೆ ಯಾರು ನಿಜವಾಗಿ ದೇವರಲ್ಲಿ ನಂಬಿಕೆಯಿಟ್ಟಿರುತ್ತಾರೋ ಅವರು ಈ ಕ್ಷಣಿಕ ಸಮಸ್ಯೆಗಳನ್ನು ಧೈರ್ಯವಾಗಿ ಎದುರಿಸುತ್ತಾರೆ, ಏಕಂದರೆ ದೇವರು ತನ್ನ ರಾಜ್ಯವನ್ನು ಭೂಲೋಕದಲ್ಲಿ ಸ್ಥಾಪಿಸುವುದಾಗಿ ಮತ್ತು ನಿತ್ಯಜೀವ ಕೊಡುವುದಾಗಿ ವಾಗ್ದಾನ ಮಾಡಿದ್ದಾನೆ. ಹಾಗಾಗಿ ನಾವು ಚಿಂತೆಮಾಡಿ ಭ್ರಾಂತಿಗೊಳಗಾಗುವ ಕಾರಣವಿಲ್ಲ.

ಸಾಮಾನ್ಯವಾಗಿ ಜನರು ಭಾವನಾತ್ಮಕ ಸನ್ನಿವೇಶಗಳಲ್ಲಿ ಸಿಲುಕಿ, ದೈಹಿಕವಾಗಿ ಮತ್ತು ಮಾನಸಿಕವಾಗಿ ಕುಗ್ಗಿಹೋಗುತ್ತಾರೆ. ಉದ್ವೇಗವು ಸಂಕೀರ್ಣತೆಯಿಂದ ಕೂಡಿದ್ದು ದೃಡವಾದ ಪ್ರತಿಕ್ರಿಯೆಗಳಿಂದ ಕೂಡಿರುತ್ತದೆ ಎಂದು ವಿವರಿಸಿದ್ದಾರೆ. ಯಾರಾದರೂ ಕುಗ್ಗಿಹೋದವರು ಇದ್ದರೆ ಅವರು ತಮ್ಮ ಭಾವನೆಗಳನ್ನು ಉದ್ವೇಗದ ಕಾರ್ಯಗಳ ಮೂಲಕ ಹೊರಹಾಕುತ್ತಾರೆ. ಆಗ ಅವರ ಭಾವನೆಗಳನ್ನು ಹಂಚಿಕೊಳ್ಳಲು ಸಹೋದರ, ಸಹೋದರಿಯರ ಅಥವಾ ಸ್ನೇಹಿತರ ಅಗತ್ಯತೆ ತುಂಬಾ ಇರುತ್ತದೆ, ಅವರು ಅಳುವ ಮೂಲಕ ಭಾವನೆಗಳನ್ನು ಹೊರಹಾಕಿ ಅದರಿಂದ ಹಗುರಾಗಲು ಪ್ರಯತ್ನಿಸುತ್ತಿರುತ್ತಾರೆ(ಅಳು ಉದ್ವೇಗ, ಭಾವನೆ, ದುಃಖ, ದುಗುಡಗಳನ್ನು ಹೊರಹಾಕುವ ಒಂದು ಮಾರ್ಗವಾಗಿದೆ). ಯೇಸುಕ್ರಿಸ್ತನೂ ಸಹ ತನ್ನ ಭಾವನೆಯನ್ನು ಅಳುವಿನ ಮೂಲಕ ವ್ಯಕ್ತಪಡಿಸಿದ್ದಾನೆ. ಇದನ್ನು ನಾವು–***"ಯೇಸು ಕಣ್ಣೀರು ಬಿಟ್ಟನು"*** ಯೋಹಾನ 11:35ರಲ್ಲಿ ನೋಡಬಹುದು. ಅದೇರೀತಿ ಲೂಕ 19:41ರಲ್ಲಿ ನೋಡುವಾಗ–*"ಬಡವರಾದ ನೀವು ಧನ್ಯರು; ದೇವರ ರಾಜ್ಯವು ನಿಮ್ಮದೇ, ಈಗ ಹಸಿದಿರುವವರಾದ ನೀವು ಧನ್ಯರು; ನಿಮಗೆ ತೃಪ್ತಿಯಾಗುವುದು. ಈಗ ಅಳುವವರಾದ ನೀವು ಧನ್ಯರು; ನೀವು ನಗುವಿರಿ"* ಎಂದು ತಿಳಿಸಿದ್ದಾನೆ. ಇಲ್ಲಿ ಯೇಸುಕ್ರಿಸ್ತ ತಾನು ಅತ್ತಿರುವು ಮಾತ್ರವಲ್ಲದೆ, ಈ ಲೋಕದಲ್ಲಿ ನೀವು ಅಳಬೇಕು ಆಗ ನಿಮಗೆ ಸಮಾಧಾನವಾಗುವುದು ಎಂದು ಸಹ ತಿಳಿಸಿಕೊಟ್ಟಿದ್ದಾನೆ. ಪೌಲಕೂಡ ಈ ವಿಷಯವಾಗಿ ತಿಳಿಸಿಕೊಡುತ್ತಾ *"ಸಂತೋಷಪಡುವವರ ಸಂಗಡ ಸಂತೋಷಪಡಿರಿ, ಅಳುವವರ ಸಂಗಡ ಅಳಿರಿ"* (ರೋಮಾಪುರದವರಿಗೆ 12:15) ಎಂದು ಹೇಳಿದ್ದಾನೆ. ಇದರಿಂದ ನಮಗೆ ತಿಳಿದುಬರುವುದೇನೆಂದರೆ ನಾವು ಕ್ರೈಸ್ತರಾಗಿ ಮತ್ತೊಬ್ಬರ ಕಷ್ಟಸುಖಗಳ ಭಾವನೆಗಳನ್ನು ಹಂಚಿಕೊಂಡು ಭಾಗಿಯಾಗಬೇಕು ಎಂಬುದೇ ಆಗಿದೆ.

ನಾನು ಒಬ್ಬದಾದಿ(ನರ್ಸ್)ಆಗಿ ಈ ರೀತಿಯ ಅನೇಕ ಅನುಭವಗಳನ್ನು ಪಡೆದಿದ್ದೇನೆ. ಅನೇಕ ಕುಟುಂಬದಲ್ಲಿ ಪ್ರೀತಿಪಾತ್ರರಾಗಿದ್ದವರಿಗೆ ಇದ್ದಕ್ಕಿದ್ದ ಹಾಗೆಯೇ ಯಾವುದಾದರು ಮಾರಣಾಂತಿಕ ರೋಗಬಂದಾಗ, ಅವರಿಗೆ ಇದು ತಡೆದುಕೊಳ್ಳಲಾಗದ ಪೆಟ್ಟನ್ನು ಉಂಟುಮಾಡುತ್ತದೆ. ಅವರ



ದೇಹ ಯಾವುದೇ ಔಷದಗಳಿಗೆ ಸ್ಪಂದಿಸುವುದಿಲ್ಲ, ಇಂತಹ ಸಂದರ್ಭದಲ್ಲಿ ನಾವು ಏನು ಮಾಡಬಹುದು? ನಾವು ಅವರನ್ನು ಸಮಾಧಾನ, ಕನಿಕರದಿಂದ ಮಾನತಾಡಿಸಬೇಕು, ಅವರ ಭಾವನೆಗಳನ್ನು ಹಂಚಿಕೊಳ್ಳಬೇಕು, ಸಾಂತ್ವನ ಹೇಳಬೇಕು, ಅವರ ಅಳುವಿನ ಜೊತೆ ನಾವೂ ಭಾಗಿಯಾಗಬೇಕು. ಏಕಂದರೆ ನಾವು ನಮ್ಮ ಮನೆಯವರ ಸಂಗಡ ಅನೇಕಬಾರಿ ಅತ್ತಿರುತ್ತೇವೆ ಅಲ್ಲವೇ? ಅದೇರೀತಿಯ ಭಾವನೆಯನ್ನು ನಾವು ನಮ್ಮ ಕ್ರಿಸ್ತಸಹೋದರ ಸಹೋದರಿಯರೊಟ್ಟಿಗೆ ಹಂಚಿಕೊಂಡಿದ್ದೇವೆಯೇ? ಹಾಗಾದರೆ ಹೇಗೆ ನಾವು ಕ್ರಿಸ್ತನ ಅಂಗಗಳಾಗಿದ್ದೇವೆ? ನಾವು ಕ್ರಿಸ್ತನಂತೆ ಆಗಬಹುದೇ?



ಏಕೆಂದರೆ ಸುವಾರ್ತೆಗಳಲ್ಲಿ ಸ್ಪಷ್ಟವಾಗಿ ಬರೆಯಲ್ಪಟ್ಟಿದೆ, ಯೇಸುಕ್ರಿಸ್ತ ಜನರ ಮೇಲೆ ತುಂಬಾ ಪ್ರೀತಿ ಮತ್ತು ಕನಿಕರ, ದಯೆ ಉಳ್ಳವನಾಗಿದ್ದನು, ಅವರೊಟ್ಟಿಗೆ ಕಷ್ಟಗಳನ್ನು ಹಂಚಿಕೊಳ್ಳುವವನಾಗಿದ್ದನು. ಇದನ್ನು ಯೇಸು ಕುಷ್ಠರೋಗಿಗಳನ್ನು ಸ್ವಸ್ತಮಾಡಿದ ಘಟನೆಯನ್ನು ನಾವು ನೋಡುವಾಗ–"ನಿನಗೆ ಮನಸ್ಸಿದ್ದರೆ ನನ್ನನ್ನು ಶುದ್ಧಮಾಡಬಲ್ಲೆ ಎಂದು ಬೇಡಿಕೊಳ್ಳಲು ಆತನು ಕನಿಕರಪಟ್ಟು ಕೈನೀಡಿ ಅವನನ್ನು ಮುಟ್ಟಿ–ನನಗೆ ಮನಸ್ಸುಂಟು ಶುದ್ಧನಾಗು ಅಂದನು" (ಮಾರ್ಕ 1:40–41). ಮತ್ತಾಯನ ಸುವಾರ್ತೆಯಲ್ಲಿ ನೋಡುವಾಗ–"ಆತನು ಹೊರಗೆ ಬಂದು ಬಹುಜನರ ಗುಂಪನ್ನು ಕಂಡು

ಕನಿಕರಪಟ್ಟು ಅವರಲ್ಲಿದ್ದ ರೋಗಿಗಳನ್ನು ಸ್ವಸ್ಥಮಾಡಿದನು'' (ಮತ್ತಾಯ14:14).

ಕನಿಕರ ಅಥವಾ ಮರುಕವೆಂದರೆ ಇನ್ನೊಬ್ಬರ ಆಳವಾದ ಭಾವನೆಗಳನ್ನು ಹಂಚಿಕೊಂಡು ಅವರ ಸೇವೆಗಾಗಿ ಮನಮರುಗಿ ಸಾಂತ್ವನ ಹೇಳುವುದೇ ಆಗಿದೆ. ಈ ವಿಷಯವಾಗಿ ಅಪೋಸ್ತಲನಾದ ಪೇತ್ರನು ಈ ರೀತಿ ತಿಳಿಸಿಕೊಡುತ್ತಾನೆ– *"ಕಡೆಗೆ ನೀವೆಲ್ಲರೂ ಏಕಮನಸ್ಸುಳ್ಳವರಾಗಿರಿ; ಪರರ ಸುಖದುಃಖಗಳಲ್ಲಿ ಸೇರುವವರಾಗಿರಿ. ಅಣ್ಣತಮ್ಮಂದಿರಂತೆ ಒಬ್ಬರನ್ನೊಬ್ಬರು ಪ್ರೀತಿಸಿರಿ; ಕರುಣೆಯೂ, ದೀನಭಾವವೂ ಉಳ್ಳವರಾಗಿರಿ''* (1ಪೇತ್ರ 3:8). ಇದೇ ವಿಷಯವಾಗಿ ದೇವರು ಪ್ರವಾದಿಯಾದ ಜೆಕರ್ಯನ ಮೂಲಕವಾಗಿ– *"ಸೇನಾಧೀಶ್ವರನಾದ ಯೆಹೋವನು ಇಂತೆಂದಿದ್ದಾನೆ–ಸರಿಯಾಗಿ ನ್ಯಾಯತೀರಿಸಿರಿ, ಒಬ್ಬರಿಗೊಬ್ಬರು ಪ್ರೀತಿಕರುಣೆಗಳನ್ನು ತೋರಿಸಿರಿ''* (ಜೆಕರ್ಯ 7:9) ಎಂಬುದಾಗಿ ತಿಳಿಸಿಕೊಟ್ಟಿದ್ದಾನೆ.

ಕ್ರಿಸ್ತನಲ್ಲಿ ಸಹೋದರ ಸಹೋದರಿಯರಾದ ನಾವುಗಳು ಹೇಗೆ ಒಬ್ಬರು ಇನ್ನೊಬ್ಬರಿಗೆ ದಯೆ ಕರುಣೆ ಮತ್ತು ಕನಿಕರವನ್ನು ತೋರಿಸುವುದು? ನಾವು ಇನ್ನೊಬ್ಬರ ಸಮಸ್ಯೆಯನ್ನು ಸರಿಯಾಗಿ ಆಲಿಸಬೇಕು, ತೀರ್ಪುಮಾಡಬಾರದು ಮತ್ತು ದೊಡ್ಡದಾದ ಉಪದೇಶವನ್ನಾಗಲೀ, ಉಪನ್ಯಾಸವನ್ನಾಗಲೀ ಕೊಡಬಾರದು. ಆ ಸಂದರ್ಭಕ್ಕೆ ಅನುಗುಣವಾಗಿ ಸರಿಯಾಗಿ ಅರ್ಥಗರ್ಭಿತವಾದ ಸ್ವಲ್ಪ ಮಾತುಗಳೇ ಸಾಕು. ಕೆಲವೊಮ್ಮ ಮಾತುಗಳ ಅವಶ್ಯಕತೆಯೇ ಇರುವುದಿಲ್ಲ, ಅವರನ್ನು ಅಲಂಗಿಸಿಕೊಂಡರೆ ಅಥವಾ ಅವರೊಡನೆ ಅತ್ತರೆ ಅವರಿಗೆ ಎಷ್ಟೋ ಸಮಾಧಾನ ಕೊಟ್ಟಂತೆ ಆಗುತ್ತದೆ.

ಯಾರಾದರೂ ಸಹೋದರ ಸಹೋದರಿ ತೀವ್ರತರವಾದ ಖಾಯಿಲೆಗೆ ಬಿದ್ದಿದ್ದರೆ, ಅವರಿಗೆ ಪ್ರೀತಿ, ಕನಿಕರ ಮತ್ತು ಕರುಣೆಗಳನ್ನು ಅಪಾರವಾಗಿ ತೋರಿಸಬೇಕೇ ಹೊರತು, ಅದನ್ನು ಸೀಮಿತಗೊಳಿಸಬಾರದು. ನಮ್ಮ ಪ್ರೀತಿ ಮತ್ತು ಕನಿಕರವನ್ನು ನಮ್ಮ ಸಹಬಾಗಿಗಳು(ಹೆಂಡತಿ/ಗಂಡ), ಮಕ್ಕಳು, ತಂದೆತಾಯಿಗಳು, ಸಹೋದರಿ ಸಹೋದರಿಯರೊಟ್ಟಿಗೆ ಎಲ್ಲಾ ಕಾಲದಲ್ಲೂ ಅಂದರೆ, ಸಂತೋಷದ ಸಮಯಗಳಲ್ಲಿ ಮತ್ತು ಕಷ್ಟದ ಕಾಲದಲ್ಲಿ ಕೂಡ ಹಂಚಿಕೊಳ್ಳುವವರಾಗಿರಬೇಕು ಆಗಮಾತ್ರ ನಾವು ಯೇಸುವಿನ ಹಿಂಬಾಲಕರಾಗಲು ಸಾಧ್ಯ. ಈ ವಿಷಯವಾಗಿ ಪೌಲನು– *"ಎಲ್ಲಾ ವಿಷಯಗಳಲ್ಲಿ ನಾನು ನಿಮಗೆ ಮಾದರಿ ತೋರಿಸಿದ್ದೇನೆ, ನೀವು ಹಾಗೆಯೇ ದುಡಿದು ಬಲವಿಲ್ಲದವರಿಗೆ ಉಪಕಾರ ಮಾಡಬೇಕು; ಮತ್ತು ತೆಗೆದುಕೊಳ್ಳುವುದಕ್ಕಿಂತ ಕೊಡುವುದೇ ಹೆಚ್ಚಿನ ಬಾಗ್ಯವೆಂಬುದಾಗಿ ಕರ್ತನಾದ ಯೇಸು ತಾನೇ ಹೇಳಿದ ಮಾತುಗಳನ್ನು ನೆನಪಿನಲ್ಲಿ ಇಟ್ಟುಕೊಂಡಿರಬೇಕು ಅಂದನು''* (ಅಪೋಸ್ತಲರ ಕೃತ್ಯಗಳು 20:35). ಅದೇ ರೀತಿ ಪೌಲನು ಥೆಸಲೋನಿಕದವರಿಗೆ ಪತ್ರಿಕೆ ಬರೆಯುತ್ತಾ– *"ಸಹೋದರರೇ ಆಕ್ರಮವಾಗಿ ನಡೆಯುವವರಿಗೆ ಬುದ್ಧಿಹೇಳಿರಿ, ಮನಗುಂದಿದವರನ್ನು ಧೈರ್ಯಪಡಿಸಿರಿ, ಬಲಹೀನರಿಗೆ ಆಧಾರವಾಗಿರಿ, ಎಲ್ಲರಲ್ಲಿಯೂ ಧೀರ್ಘಶಾಂತಿರಾಗಿರಿ ಎಂದು ನಿಮ್ಮನ್ನು ಪ್ರಭೋದಿಸುತ್ತೇವೆ''* (1ಥೆಸಲೋನಿಕ 5:14). ಯೇಸುಕ್ರಿಸ್ತ ಈ ವಿಷಯವಾಗಿ ನಮಗೆ ತಿಳಿಸಿಕೊಡುತ್ತಾ ***"ಜನರು ನಿಮಗೆ ಏನೇನು ಮಾಡಬೇಕೆಂದು ಅಪೇಕ್ಷಿಸುತ್ತೀರೋ, ಅಂಥದನ್ನು ನೀವು ಅವರಿಗೆ ಮಾಡಿರಿ''*** (ಲೂಕ 6:31).

***–ಮೇರಿ ಬಿಲಿಲ್ಲೊ***






ಮೇಲೆ ಚಿತ್ರದಲ್ಲಿ ಕಾಣಿಸಿರುವ ಪಕ್ಷಿ ***ರೋಡ್‌ರನ್ನರ್*** ಎಂಬ ಪಕ್ಷಿಯಾಗಿದ್ದು, ಇದರ ವಿಷೇಶ ಗುಣಲಕ್ಷಣಗಳಿಂದ ನಾವು ದೇವರ ಸೃಷ್ಟಿಮಹತ್ವವನ್ನು ತಿಳಿಯಬಹುದು. ಇದರ ಗರಿಗಳು ಮತ್ತು ರೆಕ್ಕೆಗಳು ಕಪ್ಪುಬಣ್ಣದ ಕಲೆಗಳಿಂದ ಕೂಡಿವೆ. ಇವು ಸೂರ್ಯನ ಶಾಖವನ್ನು ಹೀರಿಕೊಂಡು ಆ ಪಕ್ಷಿಯ ದೇಹಕ್ಕೆ ಶಾಖವನ್ನು ಒದಗಿಸುತ್ತವೆ, ಹೇಗೆ ಸೌರಶಕ್ತಿಯ ಮನೆಗಳಲ್ಲಿ ಫಲಕಗಳು ಸೂರ್ಯನ ಶಾಖವನ್ನು ಹೀರಿಕೊಳ್ಳುತ್ತವೋ ಅದೇರೀತಿ ಈ ಪಕ್ಷಿಯು ಶಾಖವನ್ನು ಹೀರಿಕೊಳ್ಳುತ್ತದೆ. ಎಷ್ಟೊಂದು ವಿಶೇಷವಾದ ವ್ಯವಸ್ಥೆಯನ್ನು ದೇವರು ಈ ಪಕ್ಷಿಗೆ ದಯಪಾಲಿಸಿದ್ದಾನೆ ಅಲ್ಲವೇ! ಇದನ್ನು ನಾವು ಬೆಳಕಿನ ಪಕ್ಷಿ ಎಂದೇ ಹೇಳಬಹುದು, ಈ ಬೆಳಕಿನ ಪಕ್ಷಿ ರ್‍ಯಾಟಲ್ ಸ್ನೇಕ್ ಹಾವುಗಳ ಜೊತೆ ಹೋರಾಟಕ್ಕೆ ಹೆಸರುವಾಸಿಯಾಗಿದೆ, ತನಗೆ ಎದುರಾದ ಹಾವನ್ನು ತಟಕ್ಕನೆ ಕೊಕ್ಕಿನಿಂದ ಕುಕ್ಕುತ್ತದೆ, ಅದು ಸಾಯುವವರೆಗೂ ಅದರ ತಲೆಯಮೇಲೆ(ಆದಿ 3:15) ಕುಟುಕಿ ಸಾಯಿಸುತ್ತದೆ.

# ಪ್ರವಾದಿಯಾದ ಎಲೀಷನ ಕಾರ್ಯಗಳು

ಸತ್ಯವೇದದ ಮುಖಾಂತರ ನಮಗೆ ತಿಳಿದುಬರುವಂತಹ ಮಹಾಪ್ರವಾದಿಯಾದ ಎಲೀಯನು ಭೂಲೋಕದಿಂದ ತೆಗೆಯಲ್ಪಟ್ಟಮೇಲೆ, ಆತನನ್ನು ಯೇಸುಕ್ರಿಸ್ತನ ಎರಡನೇ ಬರೋಣದಲ್ಲಿ ಬೇಟಿ ಮಾಡಬಹುದಾಗಿದೆ. ಎಲೀಯನು ಹೋದಮೇಲೆ ಯೆಹೂದ್ಯರು ಮೆಸ್ಸೀಯನ ಮುಂದಾಗಿ ಪ್ರವಾದಿಯಾದ ಎಲೀಯನು ಬರುತ್ತಾನೆ ಎಂದು ಕಾದುಕೊಂದಿದ್ದರು. ವರ್ಷದಿಂದ ವರ್ಷಕ್ಕೆ ಯೆಹೂದ್ಯರು ಪಸ್ಕ ಹಬ್ಬವನ್ನು ಆಚರಿಸುವ ಸಂದರ್ಭದಲ್ಲಿ ತಮ್ಮ ಮನೆಯಲ್ಲಿ ಎಲೀಯನಿಗಾಗಿ ಒಂದು ಸ್ಥಾನವನ್ನು ಬಿಟ್ಟಿರುತ್ತಿದ್ದರು. ಮನೆಯವರೆಲ್ಲಾ ಒಟ್ಟಾಗಿ ಸುತ್ತಾಲೂ ಕುಳಿತು ಪಸ್ಕಬೋಜನ ಮಾಡುವಾಗ ಎಲೀಯನ ಸ್ಥಳ ಖಾಲಿಯಿರುತ್ತಿತ್ತು, ಅದು ಎಲೀಯನು ಹಿಂತಿರುಗಿ ಬಂದಿಲ್ಲ ಎಂಬುದನ್ನು ತೋರಿಸಿಕೊಡುತ್ತದೆ. ಯೆಹೂದ್ಯರ ಮಕ್ಕಳುಗಳು ಸಹ ಮಹಾಪ್ರವಾದಿಯಾದ ಎಲೀಯ ಮೆಸ್ಸೀಯನಿಗಿಂತ ಮುಂದಾಗಿ ಬರುತ್ತಾನೆ ಎಂದು ನಿರೀಕ್ಷಿಸುವವರಗಿದ್ದಾರೆ.

ಆದರೆ ನಿಜಜೀವನದಲ್ಲಿ ನೋಡುವಾಗ ಎಲೀಯನು ಎಲೀಷನಿಗಿಂತ ಮುಂದಾಗಿ ಬಂದವನಾಗಿದ್ದು ಆತನಿಗೆ ಮಾರ್ಗವನ್ನು ಸಿದ್ದಪಡಿಸಿದ್ದಾನೆ. ಹೇಗೆ ಸ್ನಾನಿಕನಾದ ಯೋಹಾನನು ಯೇಸುಕ್ರಿಸ್ತನಿಗಾಗಿ ಜನರನ್ನು ಸಿದ್ದಪಡಿಸಿದನೋ ಅದೇರೀತಿ ಎಲೀಯನು ಎಲೀಷನಿಗೆ ದಾರಿಯನ್ನು ಸಿದ್ದಮಾಡಿದನು.

ಎಲೀಯನು ಕಠಿಣವಾದ ಮಾತುಗಳಿಂದ ಇಸ್ರಾಯೇಲ್ಯರಿಗೆ ಅವರ ಪಾಪಕಾರ್ಯಗಳ ಬಗ್ಗೆ, ನಿಜದೇವರನ್ನು ಬಿಟ್ಟು ಅನ್ಯದೇವರುಗಳನ್ನು ಆರಾಧಿಸುವುದರಬಗ್ಗೆ, ದೇವರ ನ್ಯಾಯತೀರ್ಪಿನ ಬಗ್ಗೆ ಮತ್ತು ಪರಲೋಕದಿಂದ ದೇವರು ಕೊಡುವ ಶಿಕ್ಷೆಯಬಗ್ಗೆ ಎಚ್ಚರಿಕೆಯನ್ನು ನೀಡಿದನು. ಹಾಗೂ ದೇವರ ಕಾರ್ಯಗಳನ್ನು ನಡೆಸಿದ ಮಹಾಪ್ರವಾದಿಯಾಗಿದ್ದಾನೆ. ಇವನ ನಂತರ ಬಂದಂತಹ ಪ್ರವಾದಿಯಾದ ಎಲೀಷನು ಇಸ್ರಾಯೇಲ್ ಜನರಿಗೆ ಉಪದೇಶಕನಾಗಿ, ಪ್ರವಾದಿಯಾಗಿ ಇನ್ನೂ ಪ್ರಭಾವಿಯಾಗಿ ದೇವರ ಸೇವೆಯನ್ನು ಮಾಡಿದವನಾಗಿದ್ದಾನೆ.

ಎಲೀಷನು ತನ್ನ ಕಾರ್ಯದ ಪ್ರತಿಫಲವನ್ನು ತನ್ನ ಶಿಷ್ಯಮಂಡಲಿ(ಪ್ರವಾದಿ ಮಂಡಲಿ)ಯವರ ಬೆಳವಣಿಗೆಯಲ್ಲಿ ಕಂಡುಕೊಂಡನು. ಈತ ಎಲೀಯನಿಗಿಂತ ಅಧಿಕವಾದ ಅದ್ಭುತಕಾರ್ಯಗಳನ್ನು ಮಾಡಿದನು ಮತ್ತು ಆತನು ಮಾಡಿದ ಅನೇಕ ಕಾರ್ಯಗಳು ಕರ್ತನಾದ ಯೇಸುಕ್ರಿಸ್ತನು ಮಾಡಿದ ಕಾರ್ಯಗಳಿಗೆ ಹೋಲಿಕೆಯಾಗಿವೆ.

ಎಲೀಯನ ಮುಖಾಂತರ ದೇವರು ನಿಯಮಗಳನ್ನು ಮೀರಿ ನಡೆದರೆ ಅದು ಪಾಪವಾಗಿದೆ ಮತ್ತು ನ್ಯಾಯತೀರ್ಪು ಕಠಿನಶಿಕ್ಷೆ, ಮರಣ ಖಂಡಿತವಾಗಿದೆ ಎಂಬುದನ್ನು ಎಚ್ಚರಿಕೆ ಮೂಲಕ ತಿಳಿಸಲ್ಪಟ್ಟಿದೆ. ಆದರೆ ಎಲೀಷನ ಕಾರ್ಯಗಳನ್ನು ನೋಡುವಂತಹ ಸಂದರ್ಭದಲ್ಲಿ ದೇವರು ಕರುಣೆ ಮತ್ತು ಕೃಪೆಯ ನಿಯಮವನ್ನು ದೇವರು ತಿಳಿಸಿಕೊಟ್ಟಿದ್ದಾನೆ. ಇದೇ ನಿಯಮದಡಿಯಲ್ಲಿ ಯೇಸುಕ್ರಿಸ್ತನು ಕಾರ್ಯನಿರ್ವಹಿಸಿದ್ದನ್ನು ನಾವು ಕಾಣಬಹುದು.

ಎಲೀಯ ಎಂದರೆ ***"ಯೆಹೋವನೇ ದೇವರು ಮತ್ತು ಶಕ್ತಿದಾಯಕನಾಗಿದ್ದಾನ್"*** ಎಂದು ಅರ್ಥವಿದೆ. ಆದರೆ ಎಲೀಷ ಎಂದರೆ ***"ದೇವರು ರಕ್ಷಣಾಕರ್ತನಾಗಿದ್ದಾನೆ ಅಥವಾ ವಿಮೋಚನಾಕರ್ತ ಆಗಿದ್ದಾನ್"*** ಎಂಬುದಾಗಿದೆ. ಯೆಹೋವನ ಶಕ್ತಿಯು ಎಲೀಯನ ಜೀವನದ




ಮುಖಾಂತರ ಕಾರ್ಯಗಳನ್ನು ನಡೆಸಿದೆ; ಅದೇರೀತಿ ಯೆಹೋವದೇವರು ಹೇಗೆ ಕರುಣೆಯನ್ನು ನೀಡಬಲ್ಲವನಗಿದ್ದಾನೆ ಎಂಬುದು ಎಲೀಷನ ಕಾರ್ಯಗಳ ಮೂಲಕ ತೋರಿಬರುತ್ತದೆ.

ಎಲೀಯ ತನ್ನ ನಂತರ ಬರುವವನ ಆಯ್ಕೆಯ ವಿಷಯದಲ್ಲಿ ಆತಿ ಆಶ್ಚರ್ಯವುಳ್ಳವನಾಗಿದ್ದ, ಏಕೆಂದರೆ ಆತ ನಾನೊಬ್ಬನೇ ಮಾತ್ರ ಉಳಿದಿದ್ದೇನೆ ಎಂದು ನಂಬಿದ್ದ. ಇದನ್ನು ನಾವು 1ಅರಸು 19:10ರಲ್ಲಿ ನೋಡಬಹುದು–"ನಾನೊಬ್ಬನೇ ಉಳಿದು ನಿನ್ನ ಗೌರವವನ್ನು ಕಾಪಾಡುವುದರಲ್ಲಿ ಆಸಕ್ತನಾಗಿದ್ದೆನು". ಆದರೆ ಮುಂದೆ ಎಲೀಯನು ಯೌವ್ವನಸ್ಥನಾದ ಎಲೀಷನನ್ನು ಕಂಡುಕೊಂಡನು; ಎಲೀಷನನ್ನು ನೋಡುವಾಗ, ಬೋಳುಮಂಡೆಯವನಾಗಿದ್ದ, ಹನ್ನೊಂದು ಎತ್ತುಗಳನ್ನು ತನ್ನ ತಂದೆಯ ಹೊಲದಲ್ಲಿ ಉಳುವುದಕ್ಕೆ ಸೇರಿಸಿ ಹನ್ನೆರಡೆಯ ಎತ್ತಿಗೆ ಬದಲಾಗಿ ತಾನೇ ಉಳುತ್ತಿದ್ದನು. ಆತ ಕೆಲಸ ಮಾಡುತ್ತಿದ್ದ ಸ್ಥಳದ ಹೆಸರು **"ಅಬೆಲ್ ಮಹೋಲ"** ಆಗಿದ್ದು ಅದರ ಅರ್ಥ ***"ನರ್ತನ ಮಾಡುವ ಹುಲ್ಲುಗಾವಲು"*** ಎಂಬುದಾಗಿದೆ.

ಯೆಹೋವ ದೇವರು ತನ್ನ ಸೇವಕನನ್ನು–ಆತ ತನ್ನ ಎಲ್ಲಾ ಕೆಲಸಗಳನ್ನು ಬಿಟ್ಟುಬರಲು ಮತ್ತು ದೇವರ ಕಾರ್ಯಗಳನ್ನು ನಡೆಸಲು ಎಲೀಷನನ್ನು ಆಯ್ಕೆಮಾಡಿದನು. ಆತ ಎಲೀಯನ ಕಾರ್ಯಗಳನ್ನು ಸಮರ್ಥವಾಗಿ ಮುಂದುವರೆಸಿ ನಡೆಸಿದನು.

## ಎಲೀಷನು ಯೆರಿಕೋ ಪಟ್ಟಣದ ನೀರನ್ನು ಶುದ್ಧಪಡಿಸಿದ್ದು (2ಅರಸು 2:19) :–


ಎಲೀಯನು ಭೂಲೋಕದಿಂದ ತೆಗೆಯಲ್ಪಟ್ಟದ್ದನ್ನು ನೋಡಿದ ತರುವಾಯ ಎಲೀಷನು ಯೋರ್ದನ್ ಹೊಳೆಯನ್ನು ದಾಟಿದನು ಮತ್ತು ಯೆರಿಕೋ ಪಟ್ಟಣದಲ್ಲಿ ಪ್ರವಾದಿಮಂಡಲಿಯ ಗುಂಪು ಇದ್ದುದರಿಂದ ಅಲ್ಲೇ ಸ್ವಲ್ಪಕಾಲ ನಿಂತನು. ಅಲ್ಲಿನ ಜನರು ಒಂದು ಪ್ರಮುಖವಾದ ಸಮಸ್ಯೆಗೆ ಒಳಗಾಗಿದ್ದರು. ಅದೇನೆಂದರೆ ಆ ಪಟ್ಟಣವು ಉತ್ತಮವಾದ ಸ್ಥಳದಲ್ಲಿ ಕಟ್ಟಿದ್ದರೂ, ಆ ಪಟ್ಟಣವು ಶಾಪಕ್ಕೆ ಒಳಗಾಗಿದ್ದ(1ಅರಸು 16:34) ಕಾರಣ ಅಲ್ಲಿನ ಬುಗ್ಗೆಯ ನೀರು ಕುಡಿಯಲು ಮತ್ತು ವ್ಯವಸಾಯ ಮಾಡಲು ಯೋಗ್ಯವಾಗಿರಲಿಲ್ಲ.



ಅಲ್ಲಿನ ನಿವಾಸಿಗಳು ಈ ಸಮಸ್ಯೆಯನ್ನು ಎಲೀಷನಿಗೆ ತಿಳಿಸಿದರು–"ಯೆರಿಕೋವಿನ ಜನರು ಎಲೀಷನಿಗೆ ನಮ್ಮ ಒಡೆಯನದ ನಿನಗೆ ಗೊತ್ತಿರುವಂತೆ ಈ ಊರು ಕಟ್ಟಲ್ಪಟ್ಟಿರುವ ಸ್ಥಳವು

ಒಳ್ಳೆಯದಾಗಿದೆ; ಆದರೆ ನೀರು ಕೆಟ್ಟದ್ದಾಗಿರುವುದರಿಂದ ಬಂಜೆತನ ಹೆಚ್ಚು ಎಂದು ಹೇಳಿದರು" (2ಅರಸು 2:19).

"ಆಗ ಎಲೀಷನು ಅವರಿಗೆ–ಒಂದು ಹೊಸ ಮಡಕೆಯಲ್ಲಿ ಉಪ್ಪುಹಾಕಿ ಅದನ್ನು ತಂದುಕೊಡಿರಿ ಅಂದನು. ಅವರು ತಂದುಕೊಡಲು ಅವನು ಬುಗ್ಗೆಗೆ ಹೋಗಿ ಆ ನೀರಿನಲ್ಲಿ ಉಪ್ಪುಹಾಕಿ–ಇನ್ನುಮುಂದೆ ಈ ನೀರಿನಿಂದ ಮರಣವೂ ಬಂಜೆತನವೂ ಉಂಟಾಗಂತೆ ಇದರಲ್ಲಿದ್ದ ದೋಷವೆಲ್ಲಾ ಪರಿಹರಿಸಿದ್ದೇನೆ ಎಂಬದಾಗಿ ಯೆಹೋವನು ಅನ್ನುತ್ತಾನೆ ಎಂದು ಹೇಳಿದನು, ಕೂಡಲೇ ನೀರಿನಲ್ಲಿದ್ದ ದೋಷವೆಲ್ಲಾ ಪರಿಹಾರವಾಯಿತು" (2ಅರಸು 2:20–21).



ಎಲೀಷನು ಅಂದು ತಿಳಿಸಿದ ವಾಕ್ಯದಂತೆ ಆ ನೀರು ಪರಿಶುದ್ಧವಾಗಿ ಬಂಜೆತನ ಹೋಗಿ ಶುದ್ಧವಾದ ನೀರು ಹರಿಯಲು ಪ್ರಾರಂಭವಾಯಿತು. ಅಲ್ಲಿ ಹಾಕಿದ ಉಪ್ಪು ಕೆಲಸ ನಡೆಸಿ ನೀರು ಶುದ್ಧವಾದುದಲ್ಲ, ಉಪ್ಪು ಯೆಹೋವ ದೇವರು ಇಸ್ರಾಯೇಲ್ಯರೊಟ್ಟಿಗೆ ಮಾಡಿಕೊಂಡ ಒಡಂಬಡಿಕೆಯ ಗುರುತಾಗಿದೆ(ಅರಣ್ಯಕಾಂಡ 18:19). ಇಲ್ಲಿ ಯೆರಿಕೋವಿನ ಜನರು ದೇವರ ಒಡಂಬಡಿಕೆಗೆ ದೂರವಾಗಿದ್ದರು, ಎಲೀಷನ ಕಾರ್ಯದ ಮೂಲಕ ಮತ್ತೆ ದೇವರು ಯೆರಿಕೋವಿನವರೊಡನೆ ಒಡಂಬಡಿಕೆ ಮಾಡಿಕೊಂಡಿದ್ದಾನೆ ಎಂಬುದು ಸೂಚಿತವದುದಾಗಿದೆ. ಏಕಂದರೆ ಉಪ್ಪು ಒಡಂಬಡಿಕೆಗೆ ಮತ್ತು ಪರಿಶುದ್ಧತೆಗೆ ಸಾಂಕೇತಿಕವಾದುದಾಗಿರುವುದರಿಂದ, ಯಜ್ಞವನ್ನು ಅರ್ಪಿಸುವ ಸಂದರ್ಭದಲ್ಲಿ ಯಾವ ಯಜ್ಞವನ್ನೂ ಉಪ್ಪಿಲ್ಲದೆ ಸಮರ್ಪಿಸುವಹಾಗಿರಲಿಲ್ಲ(ಯಾಜಕಕಾಂಡ 2:13).

ಈ ಕಾರ್ಯ ನಡೆಸುವ ಸಂದರ್ಭದಲ್ಲಿ ಎಲೀಷನನ್ನು ಹಿಂಬಾಲಿಸಿದ ಜನರಿಗೆ ಆತನ ಕಾರ್ಯದ ಮೂಲಕ ದೇವರ ಜ್ಞಾನವನ್ನು ಮತ್ತು ಒಡಂಬಡಿಕೆಯನ್ನು ತಿಳಿಸಿಕೊಟ್ಟಿದ್ದಾನೆ. ಇಸ್ರಾಯೇಲ್ಯರಿಗೆ ನೀವು ನಿಮ್ಮ ಪಿತೃಗಳಾದ ಅಬ್ರಹಾಮ ಮತ್ತು ದಾವೀದನೊಟ್ಟಿಗೆ ದೇವರು ಮಾಡಿಕೊಂಡ ಒಡಂಬಡಿಕೆಯಲ್ಲಿ ಪಾಲುದಾರರಾಗಿದ್ದೀರಿ ಎಂಬುದನ್ನು ತಿಳಿಸಿಕೊಟ್ಟಿದ್ದಾನೆ.



## ಬೇತೇಲಿನ ದುರಂತ (2ಅರಸುಗಳು 2:23–25) :–

ಇಸ್ರಾಯೇಲ್ ದೇಶದಲ್ಲಿ ಬೆಟ್ಟಗಳ ಸಾಲಿನಲ್ಲಿ ಎತ್ತರದ ಪ್ರದೇಶದಲ್ಲಿ ಬೇತೇಲ್ ಪಟ್ಟಣವು ಕಟ್ಟಲ್ಪಟ್ಟಿದೆ. ಸತ್ಯವೇದದಲ್ಲಿ ಅನೇಕ ಮುಖ್ಯ ಘಟನೆಗಳು ನಡೆದಿರುವುದಕ್ಕೆ ಈ ಸ್ಥಳ ಸಾಕ್ಷಿಯಾಗಿದೆ, ಈ ಸ್ಥಳದಲ್ಲಿ ಯೆಹೋವದೇವರು ಅಬ್ರಹಾಮನಿಗೆ ವಿಶೇಷವಾದ ವಾಗ್ದಾನವನ್ನು ಮಾಡಿ, ಈ ದೇಶವನ್ನು ನಿನಗೂ ನಿನ್ನ ಸಂತತಿಯವರಿಗೂ ಶಾಶ್ವತವಾಗಿ ಕೊಡುತ್ತೇನೆ ಎಂದು ವಾಗ್ದಾನ ಮಾಡಿದ್ದಾನೆ. ಇದು ಯೆರಿಕೋ ಪಟ್ಟಣದಿಂದ ಎತ್ತರವಾದ ಘಟ್ಟಪ್ರದೇಶದಲ್ಲಿರುವುದರಿಂದ ಈ ಪಟ್ಟಣಕ್ಕೆ(ಬೇತೇಲಿಗೆ) ಬೆಟ್ಟವನ್ನು ಹತ್ತಿ ಬರಬೇಕಿತ್ತು.

ಕಾಲಾನಂತರದಲ್ಲಿ ಇಸ್ರಾಯೇಲಿನ ಅರಸನಾದ ಯಾರೋಬ್ಬಾನು ಬಸವ ಮೂರ್ತಿಗಳನ್ನು ಪೂಜಿಸುವ ವಿಗ್ರಹ ಆರಾಧಕನಾಗಿ ಬೇತೇಲನ್ನು ತನ್ನ ಆರಾಧನೆಯ ಪ್ರಮುಖ ಪಟ್ಟಣವನ್ನಾಗಿ ಮಾಡಿದ್ದನು.

ಎಲೀಷನು ಬೇತೇಲಿಗೆ ಹೋಗಲು ನಿರ್ದರಿಸಿದನು. ಕಾರಣ ಆ ಊರಿನಲ್ಲಿ ಕೂಡ ಪ್ರವಾದಿ ಮಂಡಲಿಯವರು ಇದ್ದರು. ಆತ ಬಹುಕಷ್ಟದಿಂದ ಬೇತೆಲಿನ ಬೆಟ್ಟಗಳನ್ನು ಹತ್ತಿ ಬರುವ ಸಂದರ್ಭದಲ್ಲಿ, ಆ ಪಟ್ಟಣದ ಯೌವ್ವನಸ್ಥ ಮಕ್ಕಳು ಎಲೀಷನನ್ನು ಹಾಸ್ಯಮಾಡಿದರು. ಎಲೀಷನು ಬೋಳುತಲೆಯವನು ಆಗಿದ್ದರಿಂದ, ಆ ಕಾಲದಲ್ಲಿ ಬೋಳುತಲೆಯವರನ್ನು ಜನರು ಕೀಳುಮಟ್ಟದಲ್ಲಿ ನೋಡುತ್ತಿದ್ದರಿಂದ ಅಲ್ಲಿನ ಯೌವ್ವನಸ್ಥರು "ಬೋಳುಮಂಡೆಯವನೇ ಏರು ಬೋಳುಮಂಡೆಯವನೇ ಏರು" ಎಂದು ಹಾಸ್ಯಮಾಡಿದರು.

ಅಲ್ಲಿನ ಜನರು ಎಲೀಯನು ಭೂಮಿಯಿಂದ ತೆಗೆಯಲ್ಪಟ್ಟ ನಂತರ ಮತ್ತೆ ಸಂಪೂರ್ಣವಾಗಿ ಬಸವ ಮೂರ್ತಿಗಳ ಪೂಜೆಗೆ ತೊಡಗಿದ್ದರು ಮತ್ತು ಬಾಳ್ ಆಶೇರ ದೇವತೆಗಳನ್ನು ಆರಾಧಿಸುವವರಾಗಿದ್ದರು. ಅದಕ್ಕಾಗಿ ಅವರು ಎಲೀಷನನ್ನು ಹಾಸ್ಯಮಾಡಿದರು. ಅವರು ಯೆಹೋವನನ್ನು ಬಿಟ್ಟವರಾದದರಿಂದ, ಈ ಮೂಲಕ ದೇವರನ್ನು ತಿರಸ್ಕರಿಸಿ ಹಾಸ್ಯಮಾಡಿದರು. ಹಾಗಾಗಿ ಅಂದಿನ ಜನರು ಯೆಹೋವನ ಪ್ರವಾದಿಗಳನ್ನು ತಿರಿಸ್ಕರಿಸುವ ಮೂಲಕ ಯೆಹೋವ ದೇವರನ್ನೇ ತಿರಸ್ಕರಿಸಿದರು.

ಅವರ ಈ ಕಾರ್ಯದಿಂದ ಎಲೀಷನು ತಿರುಗಿಕೊಂಡು ಯೆಹೋವನ ಹೆಸರಿನಲ್ಲಿ ಅಲ್ಲಿನ ಯೌವ್ವನಸ್ಥರನ್ನು (ಅನ್ಯದೇವತಾ ಆರಾಧಕರನ್ನು) ಶಪಿಸಿದನು, ಕೂಡಲೇ ಎರಡು ಹೆಣ್ಣು ಕರಡಿಗಳು ಹೊರಟುಬಂದು ಅವರಲ್ಲಿ ನಲವತ್ತೆರಡು ಮಂದಿಯನ್ನು ಕೊಂದುಹಾಕಿದವು.

ಈ ಕಾರ್ಯದಿಂದ–ಜನರು ಯೆಹೋವದೇವರಿಗೆ ಎಷ್ಟು ಗೌರವವನ್ನು ಕೊಡಬೇಕು ಇಲ್ಲವಾದಲ್ಲಿ ಪರಿಣಾಮ ಮರಣ ಎಂಬುದನ್ನು ಎಲೀಷನು ಅಂದು ಇಸ್ರಾಯೇಲ್ಯರಿಗೆ ತಿಳಿಸಿಕೊಟ್ಟನು. ದೇವರ ಸೇವಕರನ್ನು, ಪ್ರವಾದಿಗಳನ್ನು ಮತ್ತು ದೇವರ ವಾಕ್ಯಗಳನ್ನು ಗೌರವದಿಂದ ಕಾಣಬೇಕು ಎಂಬುದು ಈ ಘಟನೆಯಿಂದ ತಿಳಿದುಬರುತ್ತದೆ. ಅಲ್ಲಿಂದ ಮುಂದೆ ಎಲೀಷನು ಬೇರೆಬೇರೆ ಪಟ್ಟಣಗಳಿಗೆ ಬೇಟಿನೀಡಿ ಯೆಹೋವನ ಪ್ರವಾದಿಗಳನ್ನು ಧೃಡಗೊಳಿಸಿದನು ಮತ್ತು ಜನರನ್ನು ದೇವರಕಡೆಗೆ ತಿರುಗಿಸಿ ಪಾಲಿಸುತ್ತಿದ್ದನು.